Registered No. M. 1393. ಕಾಲಾಣೆ ೧೦ ಪುಟ

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ಸಂಪುಟ ೨೩ | ಮಂಗಳೂರು, ೧೯೪೧ನೇ ಇಸವಿ ಒಕ್ಟೋಬರ ತಾರೀಕು ೧೦ನೇ ಶುಕ್ರವಾರ | ಸಂಚಿಕೆ ೫೫
VOL. XXIII | MANGALORE, FRIDAY, OCTOBER 10, 1941 | NO. 55

ಸಿಂಗಪುರದ ಕಾನ್ಫರೆನ್ಸು

ಸಿಂಗಪುರದಲ್ಲಿ "ಪ್ರಾಮುಖ್ಯವಾದ ಒಂದು ಕಾನ್ಫರೆನ್ಸ್" ಜರುಗಿದೆ. ಇದರ ಸಮಗ್ರ ವಿವರಗಳ ವರದಿ ಇನ್ನೂ ತಿಳಿದಿಲ್ಲವಾದರೂ ಅದು ಪೂರ್ವ ದೇಶಗಳ ರಕ್ಷಣೆಗೆ ಸಂಬಂಧಿಸಿದುದೆಂದು ಊಹಿಸ ಬಹುದಾಗಿದೆ. ಈ ಮಹಾಸಭೆಯಲ್ಲಿ ಭಾಗವಹಿಸಿದವರು, ಬ್ರಿಟಿಶ್ ಯುದ್ಧ ಮಂತ್ರಿ ಮಂಡಲದ ಮಿ। ಡಫ್ ಕೂಪರರು; ಆಸ್ಟ್ರೇಲಿಯದ ಪ್ರತಿನಿಧಿಗಳು; ಪೂರ್ವ ದೇಶಗಳ ಸರ್ವ ಸೇನಾಪತಿಗಳು; ಚೀನದ ಬ್ರಿಟಿಶ್ ನೌಕಾ ಬಲದ ಎಡ್ಮಿರಲ್; ಚೀನದ ಬ್ರಿಟಿಶ್ ರಾಯಭಾರಿಗಳು ಮತ್ತು ತ್ಯಾಲ್ಯಾಂಡಿನ ಬ್ರಿಟಿಶ್ ಅಧಿಕಾರಿ ಪ್ರಮುಖರು. ಮಿ। ಡಫ್ ಕೂಪರರ ಅದೊಂದು ಹೇಳಿಕೆಯಂತೆ ಈ ಸಭೆಯ ಉದ್ದೇಶವಿಷ್ಟು:—"ಸಿಂಗಪುರ, ಬರ್ಮಾ ಮತ್ತು ಇಂಡಿಯಗಳ ಯುದ್ಧ ಪ್ರಯತ್ನಗಳನ್ನು ಸಂಯೋಜಿಸಿ ಹಾಗೆ ಆಸ್ಟ್ರೇಲಿಯ, ನ್ಯೂಝಿಲ್ಯಾಂಡು ಮತ್ತು ನೆದರ್‌ಲ್ಯಾಂಡ್ ಇಂಡೀಸ್‌ಗಳೊಡನೆ ಅದು ಚೆನ್ನಾಗಿ ಕಲಸ ಮಾಡುವಂತೆ ಏರ್ಪಡಿಸುವುದು." ಆದರೆ ಇದು ಇಂಡಿಯಕ್ಕೂ ಸಂಬಂಧಿಸುವುದಾದರೂ, ಇಂಡಿಯ ಸರಕಾರದ ಸೂಚನೆಯನ್ನು ಇದರಲ್ಲಿ ಯಾರೂ ಕೇಳಿದ ಹಾಗಿಲ್ಲ; ಇಂಡಿಯದ ಪ್ರತಿನಿಧಿ, ಸರಕಾರೀ ಪ್ರತಿನಿಧಿ ಕೂಡ ಇದರಲ್ಲಿ ಇರಲಿಲ್ಲ. ಅಷ್ಟೇ ಅಲ್ಲ; ಈಗಿನ ಆಡಳಿತದ ಪದ್ಧತಿಯು ಶಾಂತಿ ಸಮಯಕ್ಕೆ ಮಾತ್ರ ತಕ್ಕುದಾಗಿದ್ದು, ಅಪಾಯಕರ ಸ್ಥಿತಿಗತಿಗಳ ಸಂಭವದಲ್ಲಿ ಅಗತ್ಯವಿರುವ ಜರೂರು ಕಾರ್ಯಕ್ರಮಗಳನ್ನು ಕೈಕೊಳ್ಳಲು ಅದರಿಂದ ಆಗದಿರುವುದರಿಂದ, ಕಾಲನಿಗಳ ಕೆಲ ಜಟುವಟಿಕೆಗಳನ್ನು ಕೈಯಲ್ಲಿರಿಸಿಕೊಂಡು ವರ್ತಿಸುವ ಅಧಿಕಾರವೆಲ್ಲ ಸಿಂಗಪುರಕ್ಕೇ ವರ್ಗಾಯಿಸಲ್ಪಡಬಹುದೆಂಬ ಒಂದು ಸೂಚನೆಯೂ ಈ ಕಾನ್ಫರೆನ್ಸಿನಲ್ಲಿ ಬಂದಂತಿರುವುದು ವಿಚಾರಾರ್ಹವೇ. ಹಾಗೆ ಜರೂರು ಕಾರ್ಯಕ್ರಮಗಳನ್ನು, ವಿಳಂಬಿಸಬಾರದೆಂಬ ದೃಷ್ಟಿಯಿಂದ, ಅಧಿಕಾರವು ಸಿಂಗಪುರದ ಅತ್ತ ವರ್ಗಾಯಿಸಲ್ಪಟ್ಟರೆ ಆಗ ಅದರ ಪರಿಣಾಮವು ಇಂಡಿಯದಲ್ಲಿ ಬಹು ದೂರ ವ್ಯಾಪಿಯಾಗುವುದೆಂಬುದು ನಿರ್ವಿವಾದ. ಹೇಗೂ ಯುದ್ಧದ ಪರಿಸ್ಥಿತಿ ಏನೋ ಕೆಲ ಹೊಸ ಬದಲಾವಣೆ ಮಾಡಿಸಲಿದೆ; ಅದೇನೆಂದು ಮುಂದೆ ನೋಡುವ.

ಉಲ್ಲಾಸವಾಗಿ, ಆರೋಗ್ಯವಾಗಿ ಮತ್ತು ಸಪುರವಾಗಿ ಏಕೆ ಇರಬಾರದು

ಕ್ರಮವಾಗಿ ಪ್ರತಿ ರಾತ್ರಿಯೂ ಎರಡು ಬೈಲ್ ಬೀನ್ಸ್‌ಗಳನ್ನು ಸೇವಿಸುವ ಅಮೂಲ್ಯ ಸೂತ್ರವನ್ನು ಅನುಸರಿಸಿದಲ್ಲಿ ನೀವು ಉಲ್ಲಾಸವಾಗಿ, ಆರೋಗ್ಯವಾಗಿ ಮತ್ತು ಅತ್ಯುತ್ತಮ ಚೇತನಗೊಂಡಿದ್ದು, ಜೀವನದ ಪೂರ್ಣ ಸುಖವನ್ನು ಅನುಭವಿಸಬಹುದು.

ಬೈಲ್ ಬೀನ್ಸ್ ಉತ್ತೇಜಿತ ಆರೋಗ್ಯ ಮತ್ತು ಕಸುವು ಉಂಟು ಮಾಡುವುವಲ್ಲದೆ, ಅಂಗ ಕಾಂತಿಯನ್ನು ಸ್ವಚ್ಛಗೊಳಿಸುವುವು ಮತ್ತು ನಿಮ್ಮ ದೇಹಾಕೃತಿಯನ್ನು ಸಪುರವಾಗಿ ಹಾಗೂ ಯೌವನವಾಗಿಡುತ್ತವೆ.

ಪ್ರತಿದಿನವೂ 1,000,000ಕ್ಕೆ ಮೇಲ್ಪಟ್ಟು ಬೈಲ್ ಬೀನ್ಸ್ ಮಾರಲ್ಪಡುತ್ತವೆ. ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸ್‌ಗಳನ್ನು ಸ್ಟಾಕ್ ಮಾಡುತ್ತಾರೆ. ಬಾಟ್ಲಿ ಒಂದರ ಬೆಲೆ ರೂಪಾಯಿ ಒಂದು. ಉದಾರ ಉಚಿತ ನಮೂನೆಗಾಗಿ ಬರಕೊಳ್ಳಿ. ಅಂಚೆ ವೆಚ ಕ್ಕಾಗಿ ಒಂದಾಣೆ ಚೀಟಿ ಕಳಿಸಿರಿ. ಏಜಂಟರು: ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ., ಮದ್ರಾಸು.

ಬೈಲ್ ಬೀನ್ಸ್ ಈ ತೆರ ಮಾಡುತ್ತವೆ: ಬೈಲ್ ಬೀನ್ಸ್ ಶುದ್ಧ ವನಸ್ಪತಿಕ ಸಾರಗಳಿಂದ ತಯಾರಿಸಿದ್ದಾಗಿವೆ, ಅದುಕಾರಣ ಪೂರ್ಣ ನಂಬಿಕೆಯಿಂದ ಇವನ್ನು ಕ್ರಮವಾಗಿ ಪ್ರತಿ ರಾತ್ರಿಯಲ್ಲೂ ಸೇವಿಸಬಹುದು. ಇವು ಜೀರ್ಣವನ್ನು ಉತ್ತೇಜಿಸಿ, ರಕ್ತ ಶುದ್ಧ ಮಾಡಿ ಕೊಬ್ಬುಂಟಾಗುವ ಮಲಪದಾರ್ಥವನ್ನು ದಿನವೂ ತೆಗೆಯುತ್ತವೆ; ಹಾಗೆ ನಿಮ್ಮನ್ನು ಉಲ್ಲಾಸವಾಗಿ, ಆರೋಗ್ಯವಾಗಿ ಮತ್ತು ಚೇತನವಾಗಿರಿಸುತ್ತವೆ.

BILE BEANS

ಬೈಲ್ ಬೀನ್ಸ್ ನಿಮ್ಮನ್ನು ಅನುವಾಗಿ ಮತ್ತು ಆರೋಗ್ಯವಾಗಿರಿಸುತ್ತವೆ.

ಇಟೆಲಿಯಲ್ಲಿ ನಾಜಿಗಳ ಪ್ರಾಬಲ್ಯ

ಇಟೆಲಿಯಲ್ಲಿ ಫೆಶಿಯಿಸ್ಟರ ಆಳಿಕೆ ಹಾಗೂ ಜರ್ಮನಿಯ ಮೇಲಧಿಕಾರಗಳ ಕುರಿತಾಗಿ ಬಹಳ ಅತೃಪ್ತಿಯುಂಟಾಗಿದೆ. ಒಂದೆರಡು ವಾರಗಳ ಹಿಂದೆ ಮಿಲಾನಿನಲ್ಲಿದ್ದ ಮೂರು ದೊಡ್ಡ ಯುದ್ಧ ಸಾಮಗ್ರಿಗಳ ಕಾರ್ಖಾನೆಗಳು ಬೆಂಕಿ ಬಿದ್ದು ಬೂದಿಯಾದುವು; ಸರಬರಾಯಿ ಪದಾರ್ಥಗಳನ್ನು ಸಾಗಿಸುತ್ತಿದ್ದ ಟೈನುಗಳು ಕಂಬಿ ತಪ್ಪಿ ಉರುಳಿದುವು; ಸುರಂಗ ಮಾರ್ಗಗಳು ನುಚ್ಚಾಗಲ್ಪಟ್ಟುವು; ಅಷ್ಟೇ ಅಲ್ಲ; ಜಿನೋವಾದಲ್ಲಿ ಗೋಧಿ ಪೆಟ್ರೋಲುಗಳ ಸಂಗ್ರಹಕ್ಕೆ ಬೆಂಕಿ ಬಿದ್ದು ನಷ್ಟವಾಯಿತು. ಟ್ರಿಯಸ್ಟಿಯಲ್ಲಿ ಉಗ್ರಾಣಗಳು, ಡಾಕುಗಳು ಪುಡಿಪುಡಿಮಾಡಲ್ಪಟ್ಟವು. ಕೈಗಾರಿಕೆ ನಗರಗಳಿಗೆ ಸಾಕಷ್ಟು ನೀರಿಲ್ಲ. ಅಣೆಕಟ್ಟುಗಳನ್ನು ಡೈನ್‌ಮೇಟ್ ಹಾಕಿ ನಾಶಮಾಡಲಾಗಿದೆ. ಸಿಸಿಲಿಯಲ್ಲಿ ಮದ್ದುಗುಂಡಿನ ಉಗ್ರಾಣವನ್ನು ಹಾರಿಸಿ ಕೆಡಿಸಲಾಗಿದೆ. ಫೈಪ್ಲೈ ಲೈನ್‌ಗಳನ್ನು ಕತ್ತರಿಸಲಾಗಿದೆ. ಇಟೆಲಿ ಸೇನೆಗಳು ಅಲ್ಲಿನ ಪ್ರಭುತ್ವದ ವಿರುದ್ಧವಾದ ಭಾವನೆಗಳನ್ನು ಇಟ್ಟುಕೊಂಡಿದೆ ಎಂದೂ, ಇಟೆಲಿಯಲ್ಲಿನ ನಾಜಿಗಳ ಮೇಲ್ವಿಚಾರದ ಅಧಿಕಾರದಿಂದ ಅವು ಅತೃಪ್ತವಾಗಿವೆ ಎಂದೂ ತಿಳಿದುಬಂದಿದೆ.

ಬ್ರಿಟನಿನ ಯುದ್ಧದ ವೆಚ್ಚ

ಬ್ರಿಟನ್ ಈಗ ದಿನವೊಂದಕ್ಕೆ ಯುದ್ಧಕ್ಕಾಗಿ ೧೩೦ ಲಕ್ಷ ಸ್ಟರ್ಲಿಂಗನ್ನು ವ್ಯಯಮಾಡುತ್ತಿದೆಯಾಗಿ ಪ್ರಕಟವಾಗಿದೆ.

ಮಲಿನದಲ್ಲಿ

ಮಲಿನದಲ್ಲಿ ದೂರದ ಪೂರ್ವದಲ್ಲಿನ ಬ್ರಿಟಿಷ್ ಮತ್ತು ಅಮೆರಿಕಗಳಲ್ಲಿನ ಸೇನಾಪತಿಗಳಿಗೆ ನಡೆಯುತ್ತಿದ್ದ ಮಾತುಕಥೆಗಳೀಗ ಮುಗಿಯಿತು. ಫೆಸಿಫಿಕ್ಕಿನಲ್ಲಿ ಈ ಎರಡು ರಾಷ್ಟ್ರಗಳಿಗೂ ಸಂಬಂಧಿಸಿದ ಸಮಸ್ಯೆಗಳನ್ನು ಇಲ್ಲಿ ತೀರ್ಮಾನಿಸಲಾಗಿದೆ ಎಂದು ಹೇಳಲಾಗಿದೆ. ಇದು ಒಂದು ರೀತಿಯಲ್ಲಿ ಜಪಾನಿಗೆ ಎಚ್ಚರಿಕೆಯನ್ನೂ ಕೊಡುವುದಾಗಿದೆ. ಆದುದರಿಂದ ಈ ತೀರ್ಮಾನವು ಅಮೆರಿಕಕ್ಕೂ ಬ್ರಿಟನಿಗೂ ಮುಖ್ಯವೆಂದು ಭಾವಿಸಲಾಗಿದೆ.

ಕನ್ನಡ ನಾಡಹಬ್ಬ

ಮುಂಬಯಿಯಲ್ಲಿ

ಸರ್. ಎಮ್. ವಿಶ್ವೇಶ್ವರಯ್ಯನವರ ಜನ್ಮದಿನೋತ್ಸವ

ಶ್ರೀ। ಆಲೂರು ವೆಂಕಟರಾಯರ ಹಿತೋಪದೇಶ

ಸಂಯುಕ್ತ ಕರ್ನಾಟಕ ಸಂಘದ ಪರವಾಗಿ, ಈ ಸಲ ಮುಂಬಯಿಯಲ್ಲಿ ಜರುಗಿದ ನಾಡಹಬ್ಬವು ಎಲ್ಲ ವಿಧದಿಂದಲೂ ಅಪೂರ್ವವಾದದ್ದೆಂದೇ ನಿರ್ವಿವಾದವಾಗಿ ಹೇಳಬಹುದು. ಜನ ಸಂದಣಿಯೆಂದರೆ, ಸರ್. ಕಾವಸ್‌ಜಿ ಜಹಾಂಗಿರ ಹಾಲ್‌ದಂಥ ಮುಂಬಯಿಯಲ್ಲಿ ಎಲ್ಲಕ್ಕೂ ದೊಡ್ಡದಾದ ಸಭಾ ಮಂದಿರದಲ್ಲಿ ಕೂಡ, ಒಬ್ಬರ ಮೇಲೊಬ್ಬರು ನಿಂತುಕೊಂಡರೂ ಸಹ ಸ್ಥಳ ಸಾಲದೆ, ಸಾವಿರಾರು ಜನರು ಹಿಂತಿರುಗಬೇಕಾಯಿತು. ಎಷ್ಟೇ ಜನಸಂದಣಿಯಾದರೂ ಮೊಗವೀರ ಯುವಕ ಸಂಘದ ಹಾಗೂ ದೇವಡಿಗ ಸುಧಾರಕ ಸಂಘದ ದಳಗಳ ಸ್ವಯಂಸೇವಕರು, ಶಿಸ್ತನ್ನೂ ಶಾಂತತೆಯನ್ನೂ ಬಹು ಅಚ್ಚುಕಟ್ಟಾಗಿ ಕಾಯ್ದಿದ್ದರು. ಸುಮಾರು ೬೦೦೦ಕ್ಕೆ ಮೇಲ್ಪಟ್ಟು ಕನ್ನಡಿಗರು ನೆರೆದಿದ್ದರು. ಕರ್ನಾಟಕದ ಮಹಾವಿಭೂತಿಗಳಾದ ಸರ್. ಎಮ್. ವಿಶ್ವೇಶ್ವರಯ್ಯನವರ ಲಗ್ನತೆಯ ಹುಟ್ಟುಹಬ್ಬವು ಜರುಗತಕ್ಕದ್ದಿದ್ದುದರಿಂದ, ಅನೇಕ ಪ್ರಮುಖ ಕನ್ನಡೇತರ ಜನರು ಸಹ ಆಗಮಿಸಿದ್ದರು. ಕರ್ನಾಟಕತ್ವದ ಭಾವನೆಯ ಉದ್ದೀಪಕರೂ ಕರ್ನಾಟಕದ ಕುಲಪುರೋಹಿತರೆಂಬ ಅಭಿಧಾನವನ್ನು ಕನ್ನಡ ಜನತೆಯಿಂದ ಪಡೆದವರೂ ಆದ ಶ್ರೀ। ಆಲೂರ ವೆಂಕಟರಾಯರು, ಸಭಾಧ್ಯಕ್ಷರಾಗುವವರಿದ್ದುದರಿಂದ, ಈ ಮಹಾ ಪುರುಷರ ದರ್ಶನಕ್ಕೆಂದೇ ಸಾವಿರಾರು ಜನರು ಧಾವಿಸಿ ಬಂದಿದ್ದರು. ಶ್ರೀ। ಆಲೂರ ವೆಂಕಟರಾಯರು ಸಭಾಮಂದಿರದ ಹೆಬ್ಬಾಗಿಲಿಗೆ ಮೋಟಾರದಿಂದ ಬಂದು ಇಳಿದ ಕೂಡಲೆ, ಮೊಗವೀರ ಯುವಕ ಸಂಘದ ಸ್ವಯಂಸೇವಕರು "ಗಾರ್ಡ್ ಆಫ್. ಆನರ್" ಕೊಟ್ಟು ಅಭಿವಂದಿಸಿದರು. ಆಗ್ಗೆ ಸಂಯುಕ್ತ ಕರ್ನಾಟಕ ಸಂಘದ ಅಧ್ಯಕ್ಷರಾದ ದಿವಾನ್ ಬಹದ್ದೂರ್ ರಾಜಕಾರ್ಯ ಪ್ರಸಕ್ತ ಕೆ. ರಾಮಸ್ವಾಮಿಯವರೊಡನೆ, ಶ್ರೀ। ಆಲೂರ ವೆಂಕಟರಾಯರು ಸಭಾಮಂದಿರದಲ್ಲಿ ಪ್ರವೇಶಿಸಿದ ಕೂಡಲೇ, ಐದು ನಿಮಿಷಗಳ ವರೆಗೆ, ಸಭಿಕರ ಪ್ರಚಂಡ ಕರತಾಡನೆಯು ನಡೆಯಿತು. ಶ್ರೀ। ರಾಮಸ್ವಾಮಿಯವರು ಸಭಾಮಂದಿರದ ವ್ಯಾಸಪೀಠದ ಮೇಲೆ ಇರಿಸಲಾಗಿದ್ದ ಕರ್ನಾಟಕ ಸಿಂಹಾಸನಾಧೀಶ್ವರರೂ ಮೈಸೂರಿನ ಮಹಾರಾಜರೂ ಆಗಿರುವ ಶ್ರೀ। ಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರವರ ಭಾವಚಿತ್ರಕ್ಕೂ, ಅದರ ಪಕ್ಕದಲ್ಲಿಯೇ ಇರಿಸಲಾಗಿದ್ದ ಸರ್. ಎಮ್. ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೂ ಸಭಿಕರ ಪ್ರಚಂಡ ಕರತಾಡನೆಯಲ್ಲಿ, ಹೂಮಾಲೆಗಳನ್ನು ಹಾಕಿದರು.

ಮೊಗವೀರ ಪ್ರಾಥಮಿಕ ಶಾಲೆಯ ಬಾಲಬಾಲೆಯರು ಮಂಜುಳ ಧ್ವನಿಯಲ್ಲಿ ಸ್ವಾಗತ ಪದಗಳನ್ನು ಅಂದರು. ನಂತರ "ಸಂಯುಕ್ತ ಕರ್ನಾಟಕ ಸಂಘ"ದ ಕಾರ್ಯದರ್ಶಿಗಳಾದ ಶ್ರೀ। ಜಿ. ಕೆ. ಬೆಟಗೇರಿಯವರು ಶ್ರೀ। ಆಲೂರ ವೆಂಕಟರಾಯರು ಉತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂಬ ಸೂಚನೆಯನ್ನು ಮುಂದಿಡುವಾಗ್ಗೆ, ಶ್ರೀ। ವೆಂಕಟರಾಯರು ಕರ್ನಾಟಕಕ್ಕೆ ಹಾಗೂ ಕನ್ನಡಿಗರಿಗೆ ಸ್ವಾರ್ಥತ್ಯಾಗಬುದ್ಧಿಯಿಂದ ಅಖಂಡವಾಗಿ ೩೫ ವರ್ಷಗಳ ವರೆಗೆ ಸಲ್ಲಿಸಿದ ಸೇವೆಯನ್ನು ವರ್ಣಿಸಿದರು. ಈ ಸೂಚನೆಯನ್ನು ಅನುಮೋದಿಸುತ್ತಾ, ಶ್ರೀ। ಎಸ್. ಆರ್. ಎಸ್. ರಾಘವನ್ನರು, ಶ್ರೀ। ವೆಂಕಟರಾಯರ ಸ್ವಾರ್ಥತ್ಯಾಗವನ್ನು ಕೊಂಡಾಡಿ, ಇಂಥ ಮಹಾ ವಿಭೂತಿಗಳು ಕರ್ನಾಟಕದಲ್ಲಿ ದೊರೆಯುವದು ಎರಳವೆಂದು ಹೇಳಿದರು. ಬಳಿಕ ಶ್ರೀ। ವೆಂಕಟರಾಯರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಬಳಿಕ ಉತ್ಸವಗಳ ಯಶಸ್ಸನ್ನು ಕೋರಿ ಕರ್ನಾಟಕದ ಎಲ್ಲ ರಾಜರುಗಳಿಂದ ಹಾಗೂ ಪ್ರಮುಖ ಮುಂದಾಳುಗಳಿಂದ ಬಂದ ಶುಭಸಂದೇಶಗಳನ್ನು ಶ್ರೀ। ಬೆಟಗೇರಿಯವರು ಓದಿ ಹೇಳಿದರು.

ದಿವಾನ್ ಬಹದ್ದೂರ್ ರಾಮು ಸ್ವಾಮಿಯವರು ಸರ್. ಎಮ್. ವಿಶ್ವೇಶ್ವರಯ್ಯನವರ ಚರಿತ್ರೆಯನ್ನೂ, ಅವರ ಅಗಾಧ ಬುದ್ಧಿ ಮತ್ತು ಮುತ್ಸದ್ದಿತನ, ವಿಚಾರಶಕ್ತಿ, ಕಾರ್ಯತತ್ಪರತೆ, ಮಹತ್ವಾಕಾಂಕ್ಷೆ, ರಾಷ್ಟ್ರೋದ್ಧಾರ ವಿಷಯದ ಆಸಕ್ತಿ, ಔದ್ಯೋಗಿಕ ಬೆಳವಣಿಗೆಯ ಏಕಚಿಂತನೆ ಮೊದಲಾದ ಸದ್ಗುಣಗಳನ್ನು ತಮ್ಮ ಅಸ್ಖಲಿತವಾಣಿಯಲ್ಲಿ, ಒಂದು ಗಂಟೆಯ ವರೆಗೆ ವರ್ಣಿಸಿ ಇಂಥ ಮಹನೀಯರು ಕರ್ನಾಟಕದಲ್ಲಿ ಹುಟ್ಟಿದ್ದು ಕನ್ನಡಿಗರ ಸುದೈವವೆಂದೇ ಹೇಳಿ, ಪರಮೇಶ್ವರನು ಅವರಿಗೆ ತಮ್ಮ ಮಹತ್ಕಾರ್ಯವನ್ನು ನೆರವೇರಿಸುವಂತೆ ಆಯುರಾರೋಗ್ಯ ಸಾಧನಸಂಶಕ್ತಿಗಳನ್ನು ಕೊಡಲೆಂದು ಪ್ರಾರ್ಥಿಸಿದರು. ನಂತರ ಶ್ರೀ। ಎಸ್. ಆರ್. ಎಸ್. ರಾಘವನ್ನರು ಸರ್. ಎಮ್. ವಿಶ್ವೇಶ್ವರಯ್ಯನವರನ್ನು ಅಭಿನಂದಿಸುವ ಗೊತ್ತುವಳಿಯನ್ನು ಸಭೆಯ ಮುಂದೆ ಮಂಡಿಸಿ ವಿಶ್ವೇಶ್ವರಯ್ಯನವರ ಬುದ್ಧಿ ಮತ್ತು ಹಾಗೂ ಸದ್ಗುಣಗಳನ್ನು ಕೊಂಡಾಡಿದರು. "ಇಂಡಿಯನ್ ಮ್ಯಾನ್ಯುಫ್ಯಾಕ್ಚರರ್ಸ್ ಅಸೋಶಿಯೇಶನ"ದ ಉಪಾಧ್ಯಕ್ಷರಾದ ಶ್ರೀ। ನೌಕಲ ಜಂದಶಹಾ ಇವರು, ಈ ಗೊತ್ತುವಳಿಗೆ ಅನುಮೋದನವನ್ನಿತ್ತು ಸಮಯೋಚಿತ ಭಾಷಣಮಾಡಿದರು. ಆ ಮೇಲೆ ಅಧ್ಯಕ್ಷರು ಸರ್. ಎಮ್. ವಿಶ್ವೇಶ್ವರಯ್ಯನವರ ಗುಣಗಾಯನ ಮಾಡಿ, ಆ ಗೊತ್ತುವಳಿ

(೧೦ನೇ ಪುಟಕ್ಕೆ ಮುಂದುವರಿಸಿಯದೆ)

"ರಾನು ಮತ್ತು ಅವನಮಗ ಎಷ್ಟು ನೈಸನ ಮತ್ತು ಮಲಿನತೆಯುಳ್ಳವರಾಗಿ ಕಾಣುವರು!"
"ತಾಯೀ, ನಾನು ಮತ್ತು ತಂದೆ ಅಷ್ಟು ಮಲಿನರಾಗಿಯೂ ಚಂಚಾಶ್ತಾಂತರಾಗಿಯೂ ತೋರುವುದಕ್ಕೆ ಕಾರಣವೇನು? ಕೆಲವರು ನಮ್ಮನ್ನು ನೋಡಿನಗುತ್ತಿದ್ದರು...."
"ಮಗುವು ಸತ್ಯವನ್ನೇ ಹೇಳುವುದು—ನಾವೆಲ್ಲರೂ ಹಾಗೆಯೇ ಮಲಿನರಾಗಿಯೂ, ಚಂಚಾಶ್ತಾಂತರಾಗಿಯೂ, ಅನಾರೋಗ್ಯವುಳ್ಳವರಾಗಿಯೂ ಇರುವೆವು."
"ಏನು ಮಾಡಬೇಕೆಂದು ತಿಳಿಯುವುದಿಲ್ಲ. ಒಂದು ಕ್ಷಣವಾದರೂ ನಾನು ಸುಮ್ಮನಿರುವುದಿಲ್ಲ. ಬೆನ್ನು ಮುರಿಯುವವರೆಗೆ ಕೆಲಸಮಾಡಿದರೂ ಯಾವ ನೈಶ್ಯಾಸವೂ ತಂದು ಬರುವುದಿಲ್ಲ...."
"ಅದು ನಿನ್ನ ತಪ್ಪಲ್ಲವೆಂದು ನನಗೆ ಗೊತ್ತಿದೆ. ನಿನ್ನ ಸಹಾಯಕ್ಕೆ ಒಬ್ಬ ಸೇವಕನನ್ನು ನೇಮಿಸುವುದಕ್ಕೆ ನನಗೆ ಅನುಕೂಲವಿಲ್ಲ."
"ರಾಮುಭಾಯಿ ಸೇವಕನನ್ನು ನೇಮಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದುದು ತಪ್ಪು. ನಮಗೆಲ್ಲರಿಗೂ ಸಾಧ್ಯವಾಗುವ ಅನುಕೂಲ ಸೇವಕನೊಬ್ಬನಿದ್ದಾನೆ....
....ಸನ್‌ಲೈಟ್ ಸೋಪು. ನನೆ ಯಜಮಾನಿಗೆ ಅದೆಷ್ಟು ಸಹಾಯವಾಗಿದೆಯೆಂದು ನಿಮಗೆ ತಿಳಿಯದಿರಬಹುದು. ಬಿಳಿ ನುತ್ತು ಬಣ್ಣದ ಬಟ್ಟೆಗಳನ್ನು ಒಗೆಯುವುದಕ್ಕಲ್ಲದೆ ಕುಟುಂಬದ ಪ್ರತಿಯೊಂದು ಕೆಲಸಕ್ಕೂ ಅದು ಉಪಯುಕ್ತವಾಗಿದೆ. ಸನ್‌ಲೈಟ್ ಸೋಪು ಶುದ್ಧವಾಗಿರುವುದೆಂದು ಗ್ಯಾರಂಟಿಯುಳ್ಳದ್ದಾಗಿದೆ; ಬೇಗನೆ ಕೆಲಸಮಾಡುತ್ತದೆ; ಕಡಿಮೆ ಖರ್ಚು. ಅದು ಬಹಳ ಮೃದುವಾಗಿರುವುದರಿಂದ ಮಕ್ಕಳಿಗೂ ನಾನದನ್ನು ಉಪಯೋಗಿಸುತ್ತೇನೆ. ಮನೋಹರವಾದ ಸುವಾಸನೆಯೂ ಅದಕ್ಕುಂಟು."
ಕೆಲವು ವಾರಗಳ ಮೇಲೆ
"ನೀವು ಈದಿನ ಸ್ವಲ್ಪ ತಡಮಾಡಿದಿರಿ"
"ಅದಕ್ಕೆ ವಿಶೇಷಕಾರಣವೊಂದಿದೆ. ಒಂದು ಅರಮನೆಯ ಸಂತೋಷವನ್ನೂ ಸೌಖ್ಯವನ್ನೂ ಒಂದು ಬಡಗುಡಿಸಲಿಗೆ ಒದಗಿಸಿದ ಹೆಂಗುಸೊಬ್ಬಳಿಗೆ ಒಂದು ಸನ್ಮಾನ ಬಹುಮಾನ...."
SUNLIGHT SOAP
ಸನ್‌ಲೈಟ್ ಸೋಪು
S. 25—381 KN
LEVER BROTHERS (INDIA) LIMITED

ವರ್ಷಾಂತರಗಳಾಗಿ ಅಜೀರ್ಣ ಕೆಲವು ಸಮಯಗಳಲ್ಲಿ ಆಕೆಗೆ ಜೀವದಲ್ಲೇ ಆಸೆಯಿರುತ್ತಿರಲಿಲ್ಲ.

ಈಗ ನಾವು ಯಾವಾಗಲೂ ಒಂದು ಶೀಸೆ ಇರ್ವಿಂಗ್ಸ್—ಯೀಸ್ಟ್—ವೈಟ್ ಟಾನಿಕ್ ಟೇಬ್ಲೆಟ್‌ಗಳನ್ನು ಮನೆಯಲ್ಲಿಟ್ಟಿರುತ್ತೇವೆ.

IRVING'S
Yeast-Vite
TONIC TABLETS

ಅಯ್ಯಾ, ಯೀಸ್ಟ್-ವೈಟ್ ತೆಗೆದುಕೊಂಡದ್ದರಿಂದ ನನ್ನ ಹೆಂಡತಿಗುಂಟಾದ ಅತಿಶಯ ಫಲಗಳನ್ನು ಕುರಿತು ನಿಮಗೆ ತಿಳಿಸುವುದು ನನ್ನ ಕರ್ತವ್ಯವಾಗಿದೆ. ಅನೇಕ ವರುಷಗಳಾಗಿ ಆಕೆ ಅಜೀರ್ಣದಿಂದ ಕಷ್ಟಪಡುತ್ತಿದ್ದಳು. ಕೆಲವು ಸಮಯಗಳಲ್ಲಿ ನೋವನ್ನು ತಾಳಲಾರದೆ ಆಕೆಗೆ ತನ್ನ ಜೀವದಲ್ಲೇ ಆಸೆಯಿರುತ್ತಿರಲಿಲ್ಲ.

ಈಗ ನಾವು ಯಾವಾಗಲೂ ಮನೆಯಲ್ಲಿ ಒಂದು ಶೀಸೆ ಯೀಸ್ಟ್—ವೈಟ್ ಇಟ್ಟಿರುತ್ತೇವೆ. ಕೆಲವು ತಿಂಗಳುಗಳಾಗಿ, ನನ್ನ ಹೆಂಡತಿ ಪ್ರತಿ ದಿನವೂ ೩ ಟೇಬ್ಲೆಟ್‌ಗಳನ್ನು ತೆಗೆದುಕೊಳ್ಳುತ್ತಾಳೆ. ಅಜೀರ್ಣ ಸಂಬಂಧ ವ್ಯಾಧಿಗಳು ಈಗ ಅವಳನ್ನು ಸೋಂಕುವುದೇ ಇಲ್ಲ.

ಒಂದು ಸಣ್ಣ ಶೀಸೆ ಯೀಸ್ಟ್—ವೈಟ್ ನಿಂದ ಎಷ್ಟು ಗುಣವಾಗುತ್ತದೆಯೆನ್ನುವುದು ಜನರಿಗೆ ತಿಳಿದರೆ ಅವರಿಗೆ ಅತ್ಯಂತ ಆಶ್ಚರ್ಯವುಂಟಾಗುವುದೆನ್ನುವುದರಲ್ಲಿ ಸಂದೇಹವಿಲ್ಲ. ಈಚೆಗೆ ಜನಗಳ ಸಂಪಾಧನೆಯು ಕುಗ್ಗಿಹೋಗಿರುವಾಗ ಮನೆಯಲ್ಲಿ ಒಂದು ಶೀಸೆ ಯೀಸ್ಟ್—ವೈಟ್ ಇಟ್ಟುಕೊಂಡಿರುವುದು ಲಾಭಕರವೆಂದು ಹೇಳಬಹುದು. ಅಲ್ಲದೆ ಈ ಕಾಲದಲ್ಲಿ ಬರುವ ಕಾಯಿಲೆಗಳಿಗೆ ಯೀಸ್ಟ್ ವೈಟ್ ಕೈ ಔಷಧವಾಗಿದೆ.

ಈ ಕಾಗದವನ್ನಾಗಲೀ ಅಥವಾ ಅದರ ಯಾವ ಭಾಗವನ್ನಾಗಲೀ, ನೀವು ಯೀಸ್ಟ್—ವೈಟ್‌ನ ಜನಮೆಚ್ಚಿಗೆಯನ್ನು ಹೆಚ್ಚಿಸುವುದಕ್ಕೆ ಉಪಯೋಗಿಸುವುದರಲ್ಲಿ ನನಗೆ ಆಕ್ಷೇಪಣೆಯಿಲ್ಲ. ಇತಿ ನಿಮ್ಮ ಡಬ್ಲ್ಯೂ. ಪಿ.

"ಕ್ಷಣಕಾಲದಲ್ಲಿ ಪರಿಹಾರ"

ಅಯ್ಯಾ, ಕಳೆದ ಹನ್ನೆರಡು ತಿಂಗಳಿಂದ ನಾನು ತಲೆನೋವಿನಿಂದಲೂ ಸಂಧಿವಾತದಿಂದಲೂ ನರಳುತ್ತಿದ್ದೇನೆ. ಒಂದು ವಾರದ ಕೆಳಗೆ ನಿಮ್ಮ ಯೀಸ್ಟ್—ವೈಟ್ ಟೇಬ್ಲೆಟ್ ತೆಗೆದುಕೊಳ್ಳುವುದಕ್ಕೆ ಪ್ರಾರಂಭಿಸಿದೆನು. ಕ್ಷಣಕಾಲದಲ್ಲಿ ನನಗೆ ಪರಿಹಾರವಾಯಿತು. ಈ ಟೇಬ್ಲೆಟ್‌ಗಳನ್ನು ಎಷ್ಟು ಹೊಗಳಿದರೂ ಸಾಲದು. ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭಿಸಿದ ಮೊದಲು ನನ್ನ ಶರೀರಾವಸ್ಥೆಯು ಬಹಳ ಮೇಲಾಗಿದೆ. ನನ್ನ ಹಾಗೆ ನನ್ನ ಸ್ನೇಹಿತರು ಯಾರಾದರೂ ಕಷ್ಟಪಡುತ್ತಿದ್ದರೆ ಅವರಿಗೆ ನಾನು ಯೀಸ್ಟ್—ವೈಟ್ ಶಿಫಾರಸು ಮಾಡುತ್ತೇನೆ. ಇತಿ ನಿಮ್ಮ, ಡಬ್ಲ್ಯೂ. ಪಿ

ಇದರ ರಹಸ್ಯ

ಯೀಸ್ಟ್—ವೈಟ್‌ನ ಅಪಾರಶಕ್ತಿಯ ರಹಸ್ಯವೇನೆಂದರೆ ಅದು ವೈಟಾಮಿನ್ "ಬಿ" ತುಂಬಿರುವ **ಸ್ವಚ್ಛವಾದ ಔಷಧಯುಕ್ತ** ಯೀಸ್ಟ್ ಮತ್ತು ಇತರ ಅಮೂಲ್ಯ ಶಕ್ತಿವರ್ಧಕ ಔಷಧಗಳು ಪ್ರಾಮುಖ್ಯ ವೈದ್ಯರು ಹೇಳಿದಂತೆ ಶಾಸ್ತ್ರೀತಿಯಲ್ಲಿ ಬಹಳ ಜಾಗರೂಕತೆಯಿಂದ ಬೆರಸಲ್ಪಟ್ಟು ತಯಾರಾಗಿದೆ. ಯೀಸ್ಟ್—ವೈಟ್ ಅತಿ ತೀವ್ರವಾಗಿ ಫಲಿಸುವ ಶಕ್ತಿವರ್ಧಕ ಔಷಧ.

ಗುಣವಿಲ್ಲನೇ—ದುಡ್ಡು ಬೇಡ

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ನಮ್ಮ "ಗುಣವಿಲ್ಲವೇ—ದುಡ್ಡು ಬೇಡ"ಯೆನ್ನುವ ಯೋಜನೆಯನ್ನು ಯಾವಾಗಲಾದರೂ ಪರೀಕ್ಷಿಸಿದ್ದೀರಾ? ನೀವು ಬಳಲಿ ಬೆಂಡಾಗಿದ್ದರೂ, ತಲೆನೋವಿನಿಂದ ನರಳುತ್ತಿದ್ದರೂ, ವಾತಗ್ರಸ್ಥರಾಗಿದ್ದರೂ ಅಥವಾ ಯಾವ ಕಾರಣದಿಂದಲಾದರೂ ಸರಿಯೇ, ಉತ್ಸಾಹರಹಿತರಾಗಿದ್ದರೂ, ಔಷಧ ವ್ಯಾಪಾರಿಯಿಂದಲೋ ಅಥವಾ ಸ್ಟೋರಿನಿಂದಲೋ ಒಂದು ಶೀಸೆ ಇರ್ವಿಂಗ್ಸ್ ಯೀಸ್ಟ್—ವೈಟ್ ಟೇಬ್ಲೆಟ್‌ಗಳನ್ನು ತರಿಸಿಟ್ಟುಕೊಳ್ಳಿ. ಕ್ಲಪ್ತರೀತಿಯಲ್ಲಿ ಸೇವಿಸಿರಿ. ನೀವು ಪೂರ್ಣ ತೃಪ್ತಿ ಹೊಂದದಿದ್ದರೆ ಖಾಲಿ ಪ್ಯಾಕೇಟನ್ನು "ಗ್ಯಾರಂಟಿ ಸೀಲ್"ನೊಡನೆ ನಮಗೆ ಕಳುಹಿಸಿ. ನಿಮ್ಮ ಹಣವು ನಿಮಗೆ ಪೂರಾ ವಾಪಾಸುಮಾಡಲ್ಪಡುವುದು. ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಮತ್ತು ಸ್ಟೋರ್‌ಗಳಲ್ಲಿಯೂ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲೆಟ್‌ಗಳು ದೊರೆಯುತ್ತವೆ. ಸೋಲ್ ಮ್ಯಾನುಫಾಕ್ಚರರ್ಸ್:

ಇರ್ವಿಂಗ್ಸ್ ಯೀಸ್ಟ್—ವೈಟ್ ಲಿ.,
ವಾಟ್‌ಫರ್ಡ್, ಇಂಗ್ಲೆಂಡ್.

ವಿದೇಶ

ಜರ್ಮನರ ಹೊಸ ದಾಳಿ

ಲೆನೆನ್‌ಗ್ರಾಡಿನಿಂದ ಕ್ರೈಮಿಯದ ವರೆಗೆ ೧೨೦೦ ಮೈಲುಗಳ ರಣಾಂಗಣದಲ್ಲಿ ನಾಜಿಗಳು ದೊಡ್ಡ ಕಾದಾಟ ಹೂಡಿದ್ದಾರೆ. ಕಾಖೋವ್‌ನಿನ ಬಳಿಯಲ್ಲಿ ಅತ್ಯಂತ ತೀವ್ರ ಹೋರಾಟ ನಡೆಯುತ್ತಿದೆ. ಕ್ರೈಮಿಯದ ಕ್ಷೇತ್ರದಲ್ಲಿ ರಷ್ಯದವರು ಮರುದಾಳಿ ಹೂಡಿದ್ದಾರೆ. ಲೆನೆನ್‌ಗ್ರಾಡಿನ ಬಳಿ ರಷ್ಯದವರ ಪ್ರತಿಭಟನೆ ಜೋರಾಗಿದೆ. ಮುಖ್ಯವಾದ ಆಕ್ರಮಣದ ಪ್ರಯತ್ನವು ಮಾಸ್ಕೊವಿನ ಕಡೆ ನಡೆಯುತ್ತಿದೆ. ಸದ್ಯ ರಣಾಂಗಣದ ಹಲವೆಡೆಗಳಲ್ಲಿ ಜರ್ಮನರು ಕೆಲವು ಮಟ್ಟಿಗೆ ಮುಂದುವರಿದಂತೆ ಕಂಡುಬರುತ್ತಿದೆ.

ಜರ್ಮನರ ದೊಡ್ಡ ವಿಮಾನ ದಾಳಿ

ಜರ್ಮನರು ತಮ್ಮ ದೊಡ್ಡ ವಿಮಾನ ದಾಳಿಯನ್ನೂ ಈಗ ಶುರು ಮಾಡಿದ್ದಾರೆ. ಇದರಿಂದ ರಷ್ಯದ ಸೇನೆಗಳಿಗೆ ಹೆಚ್ಚಿನ ಗಾಬರಿಯುಂಟಾಗಿದೆ ಎಂದು ವಾರ್ತೆ. ಆದರೆ ರಷ್ಯದ ವಿಮಾನಗಳೂ. ಅತಿ ಚಟುವಟಿಕೆಯಿಂದ ಕೆಲಸಮಾಡುತ್ತ ಇಡಿ ರಣಾಂಗಣದಲ್ಲೇ ಶತ್ರುಗಳನ್ನು ಹಿಂದಕ್ಕೆ ಅಟ್ಟುತ್ತಿರುವಂತೆ ಹೇಳಲಾಗಿದೆ.

ರಷ್ಯದವರ ವಿಪರೀತ ನಷ್ಟವೇ?

"ಕೆಂಪು ಸೇನೆಯು ತನ್ನ ಟ್ಯಾಂಕುಗಳ ಮೂಲಬಲದಲ್ಲಿ ಮೂರರಲ್ಲಿ ಎರಡು ಪಾಲನ್ನೂ, ಮುಂದಿನ ಸಾಲಿನ ಎಮಾನಬಲದಲ್ಲಿ ಅರ್ಧ ಪಾಲನ್ನೂ ಕಳೆದುಕೊಂಡಿದೆ" ಎಂದು "ಡೈಲಿ ಎಕ್ಸ್‌ಪ್ರೆಸ್"ನ ವಾರ್ತಾದಾಯಕನ ವರದಿ. ಜರ್ಮನರ ಸದ್ಯದ ಉದ್ದೇಶವು ರಷ್ಯದ ಸೇನೆಗಳನ್ನು ವಿಭಾಗಿಸುವುದು ಹಾಗೂ ಮಾಸ್ಕೊ-ಕ್ರಾಕಸಸ್ಸಿನ ಕಡೆಗೆ ನುಗ್ಗಲು ಹಾದಿಮಾಡಿಕೊಳ್ಳುವುದು ಇದಿಷ್ಟೇ ಆಗಿದೆಯಂತೆ. ಮುಖ್ಯವಾಗಿ ಈ ಕಾರ್ಯವನ್ನು ಚಳಿಗಾಲಕ್ಕೆ ಮೊದಲೇ ಸಾಧಿಸಬೇಕೆಂದು ಅವರ ಹಾರೈಕೆ. ಅಷ್ಟೇ ಅಲ್ಲ. ವೊಲ್ಗಾ ಮತ್ತು ಕೆಸ್ಪಿಯನ್ ಸಮುದ್ರಗಳ ಅತ್ತ ತಮ್ಮ ಸೇನೆಗಳನ್ನು ಓಡಿಸಬೇಕೆಂಬುದೂ ಅವರ ಅಂತರಂಗ.

ಜಿಕ್ಕರು ಮುಹೂರ್ತ ಕಾದಿರುವರು

ಜೆಕ್ ದೇಶಾಭಿಮಾನಿಗಳು ಜರ್ಮನರ ವಿರುದ್ಧವಾಗಿ ಈಗ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಎರಡು ತಂಡಗಳಿವೆ. ಅದರಲ್ಲಿ ಒಂದು ತಂಡ ಮೊದೇವಿಯ ಮತ್ತು ಬೊಹೀಮಿಯಗಳನ್ನು ಜರ್ಮನಿಯಿಂದ ಬೇರ್ಪಡಿಸಬೇಕೆಂದು ಯತ್ನಿಸುತ್ತಿದೆ, ಇನ್ನೊಂದು ಯುದ್ಧಕ್ಕೆ ಬೇಕಾದ ಸಮಸ್ತ ಆಯುಧಗಳನ್ನೂ ಸಂಗ್ರಹಿಸುತ್ತ ಜರ್ಮನರ ಕಾಲು ಸ್ವಲ್ಪ ಜಾರಲೆಂದು ಸಮಯ ಕಾಯುತ್ತಿದೆ ಎಂದು ಸುದ್ದಿ.

ಗ್ರೇಂಡ್
ಆಕ್ಷನ್ ಸೇಲ್
ಮಹಾಜನರ ಅಪೇಕ್ಷೆ ಮೇರೆಗೆ
ಇನ್ನೂ ಕೆಲವು ದಿವಸಗಳ ವರೆಗೆ ಅನೇಕ ತರದ ಜವುಳಿಗಳು ಬೆಲೆ ಅತೀ ಕಡಿಮೆಗೆ
ವಿಕ್ರಯ ಮತ್ತು ಏಲಂ ಕೂಡಾ
ಏಲಂ ಪ್ರತಿ ಆದಿತ್ಯವಾರ
ಸಂಜೆ ಘಂಟೆ 5-30ಕ್ಕೆ ಪ್ರಾರಂಭ
ಎ. ನರದರಾಜು ಚೆಟ್ಟಿಯಾರ್,
ಜವುಳಿ ಅಂಗಡಿ
ಮಾರ್ಕೆಟ್ ರಸ್ತೆ, ಮಂಗಳೂರು.

ಜರ್ಮನ್ ಹಡಗುಗಳ ಮೇಲೆ ಬಲ್ಗೇರಿಯದ ಧ್ವಜ!

ಜರ್ಮನಿಯ, ರುಮೇನಿಯದ ಯುದ್ಧದ ಮತ್ತು ವ್ಯಾಪಾರೀ ಹಡಗುಗಳ ಮೇಲೆ ಬಲ್ಗೇರಿಯಾ ಧ್ವಜಗಳನ್ನು ಹಾರಾಡಿಸಿರುವರೆಂದು ತಿಳಿದುಬಂದಿದೆ. ಹಾಗೆ ಬಲ್ಗೇರಿಯದ ತಾಟಸ್ಥ್ಯದ ಉಪಯೋಗವನ್ನು ಜರ್ಮನಿ ಮಾಡಿಕೊಂಡು ಶತ್ರುಗಳನ್ನು ಮೋಸಗೊಳಿಸಲು ಯತ್ನಿಸುತ್ತಿದೆ.

ಅಮೆರಿಕದ ತಾಟಸ್ಥ್ಯ ವೃತ್ತಿಯ ಕಾನೂನು

ಅಮೆರಿಕದ ಪ್ರೆಸಿಡೆಂಟ್ ಮಿ। ರುಜ್‌ವೆಲ್ಟರು ಈ ಕಾನೂನನ್ನು ಏನು ಮಾಡಬೇಕೆಂಬ ಆಲೋಚನೆಯಲ್ಲಿ ಬಿದ್ದಿದ್ದಾರೆ. ಅಗತ್ಯವಿರುವ ಕ್ಷೇತ್ರಗಳಲ್ಲಿ ವ್ಯಾಪಾರೀ ಹಡಗುಗಳಿಗೆ ಆಯುಧಗಳನ್ನು ಒದಗಿಸಬೇಕೇ ಬೇಡವೇ ಎಂಬುದೇ ಅವರ ತರ್ಕ. ಆ ಕಾನೂನನ್ನು ರದ್ದುಮಾಡಬೇಕೆಂದು ಮಿ। ವಿಲ್ಕಿಯವರೆಸ್ನವಾಗ ಬೇರೆ ಕೆಲವರು ಭಿನ್ನಾಭಿಪ್ರಾಯಪಟ್ಟವರೂ ಉಂಟು. ಇನ್ನೂ ಏನೆಂದೂ ನಿಷ್ಕರ್ಷೆಯಾಗಿಲ್ಲ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. I. A. 954/41. O. S.485/39

ಬಂಗರಡ್ಕಾ ಕೃಷ್ಣ ಭಟ್ಟ—**ಅರ್ಜಿದಾರ.**

1 ವಾಸುದೇವ ಶಾಸ್ತ್ರಿ ಸಹಾ—

ಎದ್ರಿರು.

ಪೈಕಿ

1. ವಾಸುದೇವ ಶಾಸ್ತ್ರಿ—ಸುಬ್ರಾಯ ಶಾಸ್ತ್ರಿಗಳ ಮಗ—ಸುಬ್ರಮಣ್ಯ ಗ್ರಾಮ,
2. ಸುಬ್ಬಮ್ಮ—ಸುಬ್ರಾಯ ಶಾಸ್ತ್ರಿ ವಿಧವೆ ಐವರ್ನಾಡು ಗ್ರಾಮ, 3. ಕಾವೇರಿ ಹೆಂಗಸು—ಹುಲಿಚೆನ್ನಪ್ಪ ಗೌಡನ ಹೆಂಡತಿ ಐವರ್ನಾಡು ಗ್ರಾಮದ ಬಾಂಜೆಕೋಡಿ.

ಇವರಿಗೆ

ಮೇಲ್ಕಂಡ ಕ್ರಮ ನಂಬ್ರ 485/39ನೆ ದಾವೆಯ ಕೈಪೇತಿನಲ್ಲಿ ವ ಅದರಂತೆ ಡಿಕ್ರಿಯೆಲ್ಲಿ ಕೂಡಾ ಆಸ್ತಿಯ ವಿವರದಲ್ಲಿ ಸನ 7/5B ಎಂಬದರ ಬದಲಿಗೆ 5/5B ಎಂತ ಕೈತಪ್ಪಿನಿಂದ ಕಾಣಿಸಿರುವುದನ್ನು ಧುರುಸ್ತು ಪಡಿಸುವ ಬಗ್ಯೆ ಮೇಲ್ಕಂಡ ಅರ್ಜಿದಾರನು ಬರಕೊಂಡ ಅರ್ಜಿ ಮೈವ ಹರಣೆಯು ತಾ. 24—10—41ಕ್ಕೆ ಇರುವುದರಿಂದ ಸದ್ರಿ ಅರ್ಜಿ ಕುರಿತು ನಿಮ್ಮ ಆಕ್ಷೇಪಣೆ ಇದ್ದಲ್ಲಿ ಅದನ್ನು ಸದ್ರಿ ವ್ಯಾದೆ ದಿವಸ ಪೂರ್ವಾಹ್ನ 11 ಘಂಟೆಗೆ ಜ್ಯಾಹೀರುಮಾಡಿಕೊಳ್ಳತಪ್ಪಿದರೆ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದೆಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮೂಲಕ ತಿಳಿಸೋಣಾಗಿಯದೆ.

N. V. Kolathaya,
Vakil for Petitioner.

ಮೊಕ್ಕಾಂ: ಪುತ್ತೂರು, ತಾ. 7—10—41.

ಇಂದು ನಿನ್ನ ಹಲ್ಲುಗಳನ್ನು
ನೀನು **ಮೆಕ್ಲೀನ್** ನಿಂದ
ಉಜ್ಜಿರುವಿಯೇ?

ಪ್ರಿಯ ಮಹಾಶಯ,
ನಿಮ್ಮ ಪ್ರಶ್ನೆಗೆ ಉತ್ತರವಾಗಿ . . .
ಹೌದು,
ಸರಿಯಾಗಿಯೆ ಉಜ್ಜಿಕೊಂಡಿದ್ದೇನೆ!
ಥಳಥಳಿಸುವ ಬಿಳೇ ಹಲ್ಲುಗಳು, ಆರೋಗ್ಯವಾದ ವಸಡು, ಸ್ವಚ್ಛ ಹಾಗೂ ತಂಪಾಗಿರುವ ಬಾಯಿ, ಇವಕ್ಕಾಗಿ **ಮೆಕ್ಲೀನ್ಸ್** ಉಪಯೋಗಿಸಿರಿ. ಇದು ಬೇಗನೇ ಕಲೆಗಳನ್ನು ಹೋಗಲಾಡಿಸಿ, ಬಿಳುಪನ್ನೇರಿಸಿ, ಹಲ್ಲುಗಳಿಗೆ ಮೆರಗು ಕೊಡುವುದು,—ಮತ್ತೆ ಇದರ ಉಪಯೋಗದ ಖರ್ಚು ಮಿತವಾಗಿದೆ.



ಎಲ್ಲಾ ಕೆಮಿಸ್ಟ್, ಸ್ಟೋರ್‌ಗಳಲ್ಲಿ ವಿಕ್ರಯಿಸಲ್ಪಡುತ್ತದೆ.

ಲಾರ್ಡ್ ಹಾಲಿಫಾಕ್ಸರು ಯುದ್ಧಸಾಮಗ್ರಿಗಳನ್ನು ಅಮೆರಿಕವು ಇನ್ನೂ ಹೆಚ್ಚಾಗಿ ಉತ್ಪತ್ತಿಮಾಡಲಿ ಎನ್ನುತ್ತಾರೆ. ಅಂತೂ ಅಮೆರಿಕ ಯುದ್ಧದಲ್ಲಿ ಹೆಚ್ಚಿನ ಭಾಗ ವಹಿಸಿ ಸಹಾಯ ಮಾಡದಿದ್ದರೆ ಯುದ್ಧ ಬೇಗ ಮುಗಿಯದೆಂಬುದು ನಿಜ.

To serve you — — Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.

ESTD: 1906.

ಕಂಠೀರವ

KANTEERAVA

KANARESE, BI-WEEKLY

XXIII] ಮಂಗಳೂರು, ತಾರೀಕು ೧೦—೧೦—೧೯೪೧ [೫೫

೧೮೬೩ ವೃಷ ಸಂವತ್ಸರದ ಆಶ್ವೀಜ ಬ। ೫ ಶುಕ್ರವಾರ

ಇಂಡಿಯದ ಕೇಳಿಕೆಗಳನ್ನು ಮನ್ನಿಸಿ

ಇಂಡಿಯದ ಕೇಳಿಕೆಗಳನ್ನು ಮನ್ನಿಸಬೇಕೆಂದೂ ಕಾಂಗ್ರೆಸಿನ ಸಹಕಾರವನ್ನು ಪಡೆಯಬೇಕೆಂದೂ ಸೂಚಿಸಿ ಆಂಗ್ಲ ಪತ್ರಿಕೆಗಳಲ್ಲಿ ಕೆಲಕೆಲವು ಸ್ಪಷ್ಟೋಕ್ತಿಯ ಲೇಖಗಳು ಈಚಿಗೆ ಪ್ರಕಟಗೊಂಡಿವೆ. ಇದರ ಪರಿಣಾಮವು ಬ್ರಿಟನಿನ ಜನತೆಯ ಮೇಲೆ, ಈ ಯುದ್ಧದ ಸಮಯದಲ್ಲಿ ಹೇಗಾಗುವುದೆಂದು ತಿಳಿಯದಾದರೂ ಬ್ರಿಟನಿನಲ್ಲಿ ಜನತೆ ಕಣ್ಣು ಬಿಟ್ಟು ಭಾರತದ ಕಡೆಗೆ ನೋಡುವ ಪ್ರಯತ್ನಗಳು ಅಲ್ಲಿ ನಡೆಯುತ್ತಿವೆ ಎನ್ನಲು ಸಂದೇಹವಿಲ್ಲ.

ಲಂಡನಿನ "ನ್ಯೂ ಸ್ಟೇಟ್ಸ್‌ಮ್ಯಾನ್ ಮತ್ತು ನೇಶನ್ಸ್" ಎಂಬ ಪತ್ರಿಕೆ "ಇಂಡಿಯದಲ್ಲಿ ಕಿಡುಕಿಗೆ ಅಲಂಕಾರ"ವೆಂಬ ಲೇಖ ಬರೆಯುತ್ತ "ನಾವು ಯುದ್ಧದಲ್ಲಿ ಹಲವು ತಪ್ಪು ಮಾಡಿ ಅದಕ್ಕಾಗಿ ಆ ಸೋಲಿಗಾಗಿ ಹಲವು ಸಲ ದಂಡ ತೆತ್ತ ಪ್ರಸಂಗಗಳಲ್ಲಿ, ಭಾರತದ ಪ್ರಕರಣವೂ ಒಂದು" ಎಂದು ವೈಸರಾಯರ ವಿಸ್ತರಣದ ಕೌನ್ಸಿಲು, ಇಂಡಿಯದ ರಾಜಕೀಯ ಅಧಿಕಾರಗಳ ಕುರಿತು ಪ್ರಸ್ತಾವಿಸಿದೆ. ಅದೆಲ್ಲ ಹಿಂದಿನ ಶತಮಾನದ ಬ್ರಿಟಿಷರ ರೀತಿ ನೀತಿ, ಆ ನೀತಿಯಂತೆ ಕಿಡುಕಿಯನ್ನೆಷ್ಟು ಅಂದವಾಗಿ ಹೊರಗಿನಿಂದ ಅಲಂಕರಿಸಿದರೂ ಅದರೊಳಗಿರುವುದು "ಬಹು ಸ್ವಲ್ಪ" ಎಂದಿದೆ. ಅಷ್ಟೇ ಅಲ್ಲ; ಕಾಂಗ್ರೆಸ್ ಪಾರ್ಟಿ, ಮುಸ್ಲಿಂ ಲೀಗಿಗೂ, ಮತ್ತೆ ಇಂಡಿಯಾ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲವೆಂದು ತಿಳಿಸುತ್ತ, ಗವರ್ನರ ಜನರಲರ ಎಗ್ಜಿಕ್ಯುಟಿವ್ ಕೌನ್ಸಿಲಿನಲ್ಲಿ ಇರುವುದರ ಬದಲಾಗಿ, ಪಂಡಿತ ನೆಹರುಗಳಂತಹ ಭಾರತದ ನಿಜವಾದ ಜನನಾಯಕರು, ವೈಸರಾಯರ ಜೈಲಿನಲ್ಲಿ ಇದ್ದಾರೆಂದೂ, ಆದರೂ ಅವರು ಯುದ್ಧ ಕಾರ್ಯದಲ್ಲಿ ಬ್ರಿಟನಿನ ಪರವಾಗಿಯೇ ಇರುವರೆಂದೂ, ಆದರೆ ಅವರು ಬ್ರಿಟನಿನೊಡನೆ ಸಹಕರಿಸಲು ಕೊಟ್ಟಿರುವ ಆ ಶರ್ತಗಳನ್ನು ಬ್ರಿಟಿಷರು ಕೈಬಿಟ್ಟಿರುವುದು, ಇಂಡಿಯದ ಪರಿಸ್ಥಿತಿಯಲ್ಲೊಂದು ವಿಷಾದಪೂರ್ವಕ ಘಟನೆ ಎಂದೂ ಸೂಚಿಸಿದೆ. ಲಾರ್ಡ್ ಲಿನ್‌ಲಿತ್‌ಗೋರವರೂ ಮಿ। ಅಮರಿಯವರೂ ಇಂಡಿಯವನ್ನೀಗ ಕಳೆದುಕೊಳ್ಳುತ್ತಿದ್ದಾರೆಂಬುದನ್ನು ಸಕಾರಣವಾಗಿ ವಿಶದೀಕರಿಸಿ, ೧೭೦ ವರ್ಷಗಳ ಕಾಲದಲ್ಲಿ ಆಗಾಗ ಮಾಡಿದ ತಪ್ಪುಗಳನ್ನೇ ಈಗಲೂ ಮಾಡಬಾರದೆಂದು ಶ್ರುತಪಡಿಸುವುದರ ಜತೆಯಲ್ಲಿಯೇ, ಆಯರ್‌ಲ್ಯಾಂಡಿನಲ್ಲಿ ಹಿಂದೆ ಏನು ನಡೆಯಿತೋ ಅದೇ ಇಂಡಿಯದಲ್ಲಿಯೂ ನಡೆಯುತ್ತಿದೆ ಈಗ, ಕಾಂಗ್ರೆಸಿನ ಎಲ್ಲ ಕೇಳಿಕೆಗಳನ್ನೂ ಕೂಡಲೇ ಮನ್ನಿಸದಿದ್ದರೂ, ಆ ಕೇಳಿಕೆಯ ತಿರುಳನ್ನಾದರೂ ಭಾರತಕ್ಕೆ ದಾನ ಮಾಡಬೇಕು ಎಂದು ನಿವೇದಿಸಿ, ಈ ರಾಜಕೀಯ ಕಗ್ಗಂಟನ್ನು ಬಗೆಹರಿಸಲು ಮೊದಲು ಏನು ಮಾಡಬೇಕು, ಕಾಂಗ್ರೆಸಿನ ಸಹಕಾರವು ಎಷ್ಟು ಅಗತ್ಯ ಎಂದು ಸಾರಿದೆ.

ಇದೇ ರೀತಿಯಲ್ಲಿ "ಡೈಲಿ ಹೆರಾಲ್ಡ್"ನ ಮಾಜಿ ಸಂಪಾದಕರಾದ ಮಿ। ಎಲ್ಲಿಯಂ ಮೆಲ್ಲರ್‌ರವರೂ ಕಾಂಗ್ರೆಸ್ ಪಾರ್ಟಿಯ ಪ್ರಾಬಲ್ಯವನ್ನು ಸಮರ್ಥಿಸಿ, ಇಂಡಿಯದ ಕೇಳಿಕೆಯನ್ನು ಮನ್ನಿಸುವುದೊಂದೇ ರಾಜಿಗೆ ಸುಸಂದರ್ಭವೆಂದು ಪ್ರಕಟಿಸಿದ್ದಾರೆ.

ಇಷ್ಟಾದರೂ, ಬ್ರಿಟಿಷ್ ಸರಕಾರವು ಈ ನಿಜ ಸ್ಥಿತಿಯನ್ನು ಲಕ್ಷ್ಯ ಮಾಡದೆ, ಈ ಹಿತೋಪದೇಶಗಳಿಗೆ ಕಿವಿ ಕೊಡದೆ ಹೀಗೇ ವರ್ತಿಸುತ್ತಿದ್ದರೆ, ಅದರಿಂದ ಬ್ರಿಟನಿಗೆ ಹೆಚ್ಚಿನ, ದೊರಕಬೇಕಾದಷ್ಟು ಲಾಭ ದೊರಕಲಾರದೆಂಬುದು ನಿರ್ವಿವಾದ.

ಟರ್ಕೋ—ಜರ್ಮನಿ ವ್ಯಾಪಾರದ ಕರಾರು

ಟರ್ಕೋ-ಜರ್ಮನಿಯ ವ್ಯಾಪಾರದ ಕರಾರಿನ ವಿಷಯದಲ್ಲಿ ಕೊನೆಯ ನಿಮಿಷದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಆ ಕರಾರಿಗೆ ಸಹಿ ಬೀಳುವುದು ಸದ್ಯ ನಿಂತಿದೆ.

ವಿವಿಧ ವಿದ್ಯಮಾನಗಳು

ಜಪಾನಿನಲ್ಲಿ ಪೊಲೆಂಡಿನ ರಾಯಭಾರಿ ಕಾರ್ಯಾಲಯವು ಮುಚ್ಚಲ್ಪಡಲಿದೆ; ಸುವೆಜ್ ಕಾಲಿವೆಯ ಮೇಲೆ ಈಚಿಗೆ ಶತ್ರುವಿಮಾನಗಳು ಬಾಂಬು ಸುರಿಸಿದುವು; . ಮಧ್ಯ ರಣರಂಗದಲ್ಲಿ ರಷ್ಯದವರು ಹಲವು ಹಳ್ಳಿಗಳನ್ನು ತಿರುಗಿ ಹಿಡಿದಿರುವರು; ಒಡೆಸದ ಬಳಿ ರುಮೇನಿಯದವರಿಗೆ ಬಹಳ ನಷ್ಟವಾಗಿದೆ; ನಾಜಿಗಳ ಈಗಿನ ವಿಮಾನಗಳ ನಷ್ಟವು ಅದರ ಉತ್ಪತ್ತಿಗಿಂತಲೂ ಹೆಚ್ಚಾಗಿದೆ; ಜಪಾನೀಯರು ವಿಷ ವಾಯುವನ್ನು ಉಪಯೋಗಿಸುತ್ತಿರುವರೆಂದು ಚೀನೀಯರ ಆರೋಪಣೆ; ಲೆನಿನ್‌ಗ್ರಾಡಿನ ಬಳಿ ರಷ್ಯದವರು ಎರಡು ಮೂರು ಮೈಲು ಮುಂದಕ್ಕೆ ಸರಿದು, ಶತ್ರುಗಳ ಬಲವನ್ನು ಹಿಂದಕ್ಕೋಡಿಸಿದ್ದಾರೆ.

ಹಿಂದೂದೇಶ

ಹಿಂದೂ ಮಹಾಸಭೆಯ ಅಧಿವೇಶನ

ಛಾಗಲ್ಪುರದಲ್ಲಿ ಸಮಗ್ರ ಭಾರತ ಹಿಂದೂ ಮಹಾ ಸಭೆಯ ಅಧಿವೇಶನವು ನಡೆಯಬೇಕೆಂದು ಗೊತ್ತಾಗಿದ್ದು ಅದು ನಡೆಯದಂತೆ ಅಧಿಕಾರಿಗಳ ಅಪ್ಪಣೆಯಾಗಿದ್ದರೂ, ಆ ಅಧಿವೇಶನದ ಸ್ವಾಗತ ಸಮಿತಿಯವರು, ಆ ಅಧಿವೇಶನದ ಮುಂದಿನ ಕಾರ್ಯಕ್ರಮಗಳನ್ನು ಮುಂದೊತ್ತುವಂತೆ ನಿರ್ಧರಿಸಲಾಗಿದೆ. ಬಿಹಾರಿನ ೭ ಜಿಲ್ಲೆಗಳಲ್ಲಿ ಈ ಅಧಿವೇಶನ ನಡೆಯ ಕೂಡದೆಂಬ ಈ ಬಹಿಷ್ಕಾರಾಜ್ಞೆಯ ಪರಿಣಾಮವಾಗಿ, ಮಹಾ ಸಭೆಯವರು ಅಧಿವೇಶನಕ್ಕಾಗಿ ಬೇರೆ ಸ್ಥಳ ಹುಡುಕುವ ತೀರ್ಮಾನವಿನ್ನೂ ಮಾಡಿಲ್ಲ.

ಶ್ರೀ। ಸತ್ಯಮೂರ್ತಿಗಳ ಭಾಷಣ

ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ಸಾಹಿತ್ಯ ಸಂಘದಲ್ಲಿ ಶ್ರೀ। ಸತ್ಯಮೂರ್ತಿಗಳೊಂದು ಭಾಷಣ ಕೊಡುತ್ತ "ಸ್ವತಂತ್ರ ಭಾರತ" "ಅಹಿಂಸಾ ತತ್ವ"ದ ಪ್ರಾಮುಖ್ಯತೆ,—ಇವುಗಳ ಕುರಿತು ವಿಶದೀಕರಿಸಿದರು. ಅಟ್ಲಾಂಟಿಕಿನ ಮಾತುಕತೆಗಳಲ್ಲಿಯೂ ಅಹಿಂಸಾ ತತ್ವಕ್ಕೊಂದು ಸ್ಥಾನವಿದೆ; ಜನಾಂಗಗಳ ಜಗಳಗಳು ಯುದ್ಧದಿಂದಲೇ ತೀರ್ಮಾನವಾಗುವುದಲ್ಲ; ಶಸ್ತ್ರಸನ್ಯಾಸವು ಭಾರತದಲ್ಲಿ ಬ್ರಿಟನಿನಿಂದ ಅಲ್ಲದೆ, ಬೇರೆ ಯಾವ ಜನಾಂಗಗಳೂ ಆಜರಿಸಿದುದಿಲ್ಲ; ಶಸ್ತ್ರಸನ್ಯಾಸವೇ ಅಹಿಂಸೆಯ ಸಾಧನೆಯ ಪ್ರಥಮ ಉಪಾಯ ಎಂದರು ಯುದ್ಧಕ್ಕೆ ಕಾರಣವು ಆರ್ಥಿಕ ವಿಷಯಗಳು; ಇಂಡಿಯದಲ್ಲಿ ಡೆಮೊಕ್ರಸಿಯು ಏನಾದರೂ

ಇಂಡಿಯಾದ

ಇಂಡಿಯಾಕರಾವಳಿ ಇಂಡಿಯಾದ ಗಡಿಯಾಗಿದ್ದ ಕಾಲ ಕಳೆದುಹೋಯಿತು. ರೇಡಿಯೋ, ವಿಮಾನ, ವೇಗವಾದ ಹಡಗುಗಳು, ಪ್ಯಾರಾಷೂಟ್ ಸೇನೆಗಳು, ಪಂಚಮಾಂಗದ ಚಟುವಟಿಕೆಗಳು, ಇವೆಲ್ಲವೂ ದೂರದ ಅಂತರವನ್ನು ತುಂಬಾ ತಗ್ಗಿಸಿವೆ. ಇದರ ಪರಿಣಾಮವಾಗಿ ನಮಗೆ ಆಪತ್ತು ಹೆಚ್ಚಾಗಿದೆ. ಅಟ್ಲಾಂಟಿಕ್ ಸಾಗರವು ಅಮೆರಿಕದ ರಕ್ಷಣೆಯ ಪ್ರಥಮ ರಂಗವಾಗಿರುವಂತೆ—ಈ ರಂಗವನ್ನು ಅಮೆರಿಕದ ಮಿತ್ರರಾಷ್ಟ್ರವಾದ ಬ್ರಿಟನ್ ರಕ್ಷಿಸುತ್ತಿದೆ—ಈಜಿಪ್ಟ್, ಪಾಲಸ್ತೈನ್, ಸಿರಿಯಾ, ಇರಾಕ್, ಪೂರ್ವ ಆಫ್ರಿಕಾ, ಮಲಯಾ ಇವು ಇಂಡಿಯಾದ ರಕ್ಷಣೆಯ ಹೊರವಲಯಗಳಾಗಿವೆ.

ಈ ಕಾರಣಕ್ಕಾಗಿಯೇ ಇಂಡಿಯಾದ ದೇಶದ ಸೇನೆಯ ಅತ್ಯುತ್ತಮ ಯೋಧರು ಗ್ರೇಟ್ ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಮತ್ತು ಇತರ ರಾಷ್ಟ್ರಗಳ ವೀರರೊಡಗೂಡಿ, ಇಂಡಿಯಾದ ಆ ಹೊರವಲಯದ ರಕ್ಷಣ ಕ್ಷೇತ್ರಗಳಲ್ಲಿ ತಮ್ಮೆಲ್ಲರ ಸಮಾನ ಶತ್ರುವನ್ನು ಹೊಡದೋಡಿಸಲು ಸಿದ್ಧರಾಗಿ ನಿಂತಿದ್ದಾರೆ. ಇದನ್ನು ನೀವು ಗಮನಿಸಿದರೂ, ಗಮನಿಸದಿದ್ದರೂ ಈ ಜನರು ನಮ್ಮ ನಾಡಿನ ಹೊಸ ಗಡಿಗಳ ರಕ್ಷಣೆಯಲ್ಲಿ ತೊಡಗಿರುವುದರಿಂದ ನಾವು ನಿರಾತಂಕವಾಗಿ ನಮ್ಮ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಶಾಂತವಾಗಿ ಬಾಳುವುದು ಸಾಧ್ಯವಾಗಿದೆ ಎಂಬುದು ಮಾತ್ರ ನಿಜ.

ಅವನ್ನು ರಕ್ಷಿಸಲು ನೆರವಾಗಿ. ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು. GI-

ಉಳಿಯುವುದು; ಸ್ವತಂತ್ರ ಭಾರತದಲ್ಲಿ ಮನುಷ್ಯನು ನಿರ್ಮಿಸಿದ ಅಂತರಾಯಗಳೆಲ್ಲ ಉರುಳಿ ಬೀಳುವುವು ಎಂದು ಮುಂತಾಗಿ ನುಡಿದರು.

ರಾಜಕೀಯ ಖೈದಿಗಳ ಬಿಡುಗಡೆ

ಮುಂದಿನ ಕೇಂದ್ರ ಶಾಸನ ಸಭೆಯ ಅಧಿವೇಶನದಲ್ಲಿ ಶ್ರೀ। ಎನ್. ಎಂ. ಜೋಶಿಯವರು ಕೆಲವು ಕೈದಿಗಳ ಬಿಡುಗಡೆ ಮತ್ತು ಇಂಡಿಯಾ ರಕ್ಷಣಾ ಶಾಸನದ ಕೆಲ ಕೈದಿಗಳ ಮೇಲಿನ ಕೆಲವು ನಿರ್ಬಂಧಗಳ ರದ್ದಿಯಾತಿಗಾಗಿ ಒಂದು ಠರಾವನ್ನು ಚರ್ಚೆಗೆ ತರುವೆವೆಂದು ತಿಳಿಸಿದ್ದಾರೆ.

ಸಂಪಾದಕರಿಗೆ ದಂಡನೆ

ಈಗ ಪ್ರಕಟವಾಗದಿರುವ ಅಲ್ಲಹಾಬಾದಿನ ದೇಶೀಯ ವಾರ್ತಾ ಪತ್ರಿಕೆಯಾದ "ವಿಜಯ"ದ ಸಂಪಾದಕ, ಮುದ್ರಕ ಮತ್ತು ಪ್ರಕಾಶಕರಾದ ಶ್ರೀ। ಕೇಶವ ಮಿತ್ರರಿಗೆ ಇಂಡಿಯಾ ಡಿಫೆನ್ಸ್ ಆಕ್ಟ್‌ಪ್ರಕಾರ ಒಂದು ಲೇಖದ ಸಂಬಂಧ ೧೮ ತಿಂಗಳ ಕಠಿನ ಸಜೆ ಮತ್ತು ೨೦೦ ರೂಪಾಯಿಗಳ ಜುರುಮಾನೆ ವಿಧಿಸಲಾಗಿದೆ.

ಶ್ರೀಮತಿ ಕಮಲಾ ದೇವಿಯರು

ಶ್ರೀಮತಿ ಕಮಲಾ ದೇವಿಯರು ಬೊಂಬಾಯಿಂದ ವಾರ್ಧಾಕ್ಕೆ ತೆರಳಿ ಅಲ್ಲಿ ಮಹಾತ್ಮರ ಭೇಟಿ ಮಾಡಿ, ಭಾರತೀಯ ಸಮಸ್ಯೆಗಳ ವಿಚಾರದಲ್ಲಿ ತಾವು ತಮ್ಮ ಅಮೆರಿಕದ ಮತ್ತು ಯುರೋಪಿನ ಪ್ರವಾಸದ ಕಾಲದಲ್ಲಿ ಸಂಗ್ರಹಿಸಿರುವ ಅನುಭವಗಳನ್ನು ಮಹಾತ್ಮರ ಮುಂದಿರಿಸುವರೆಂದು ತಿಳಿದುಬಂದಿದೆ.

ನಾಗ್ಪುರದಲ್ಲಿ

ಇಲ್ಲಿ ಮುನಿಸಿಪಾಲಿಟಿ ತೆರಿಗೆ ಹೆಚ್ಚಿಸಿತೆಂದು ಅಲ್ಲಿನ ತೆರಿಗೆದಾರ ಸಂಘ ಆ ಮುನ್ಸಿಪಲ್ ಆಫೀಸಿನ ಎದುರು, ೪-೫ ದಿನಗಳಿಂದ ಸತ್ಯಾಗ್ರಹಕ್ಕೆ ಶುರುಮಾಡಿದೆ. ಪೋಲೀಸರು ಕೆಲಮುಂದಿ ಸತ್ಯಾಗ್ರಹಿಗಳನ್ನು ಕೈದು ಮಾಡಿದ್ದಾರೆ.

ಶ್ರೀ। ಸತ್ಯಮೂರ್ತಿಯವರು.

ಇವರು ಇಂದು ವಾರ್ಧಾಕ್ಕೆ ತೆರಳಿ ಅಲ್ಲಿ ಗಾಂಧಿಜಿ ಮತ್ತು ಬಾಬು ರಾಜೇಂದ್ರ ಪ್ರಸಾದರೊಡನೆ ಪಾರ್ಲಿಮೆಂಟರಿ ಚಟುವಟಿಕೆಗಳನ್ನು—ಮುಖ್ಯವಾಗಿ ಕೇಂದ್ರದಲ್ಲಿ—ನಿರ್ವಹಿಸುವ ವಿಚಾರದಲ್ಲಿ ಮಾತಾಡಬಹುದೆಂದು ಹೇಳಲಾಗಿದೆ.

ವಿಮಾನ ದಾಳಿಗಳ ಪರೀಕ್ಷಾ ಪ್ರಯೋಗ

ಗಡಿನಾಡಿನಲ್ಲಿ ಮತ್ತೆ ಪಂಜಾಬಿನಲ್ಲಿ ಥಮಾಮಿ ವಿಮಾನ ದಾಳಿಗಳ ಪರೀಕ್ಷಾ ಪ್ರಯೋಗಗಳು ನಡೆಯಲಾರಂಭಿಸಿವೆ. ಪೆರಜೂಟುಗಳು ವಿಮಾನ ನಿಲ್ದಾಣಗಳನ್ನು ಆಕ್ರಮಿಸುವ, ವಿಮಾನಗಳು ಬಾಂಬು ಹಾರಿಸುವ ಕಾರ್ಯಗಳೂ, ಇದಕ್ಕೆ ಸಂಬಂಧಪಟ್ಟ ಇತರ ಏರ್ಪಾಡುಗಳೂ ನಡೆಯಲಿವೆ. ಇದರ ಮುಖ್ಯೋದ್ದೇಶವು, ಇಂಡಿಯದ ರಕ್ಷಣಾ ಕಾರ್ಯಗಳನ್ನು ದೇಶದ ಒಳಭಾಗದಲ್ಲಿ ವ್ಯವಸ್ಥೆಗೊಳಿಸುವುದು.

ಗಡಿನಾಡಿನಲ್ಲಿ

ಮುಂಜೈ ಪ್ರಾಂತದಲ್ಲಿ ಕೆಲವು ಕಾಡು ಮಂದಿ ಒಂದು ಲಾರಿಯನ್ನು ಹಿಡಿದು ನಿಲ್ಲಿಸಿ ಕೆಲವರ ಬಟ್ಟೆ, ನಗದಿಯನ್ನು ಅಪಹರಿಸಿದರಲ್ಲದೆ, ಡಾರಾಬಾಮಿನ ಬಳಿ ಇನ್ನು ಕೆಲವು ಪುಂಡರು ೬ ಮಂದಿಯನ್ನು ಹಾರಿಸಿಕೊಂಡು ಹೋಗಿರುವರೆಂದೂ ತಿಳಿದುಬಂದಿದೆ.

ಕಾಂಗ್ರೆಸ್ ಸದಸ್ಯರೆದ್ದು ನಡೆದರು!

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀ। ಜಂಗಲರಾಯ ರೆಡ್ಡಿಯವರು ತರಲಿದ್ದ ಒಂದು ಅವಸರದ ಠರಾವಿನ ವಿಷಯದಲ್ಲಿ ನಿವಾಸರು ಕೊಟ್ಟ ರೂಲಿಂಗಿನ ವಿಚಾರದಲ್ಲಿ ಅಸಮಾಧಾನ ಹೊಂದಿ ಆ ಸಭಾಸದನದ ೧೦ಳ ಮಂದಿ ಕಾಂಗ್ರೆಸ್ ಸದಸ್ಯರೂ ಕೆಲವು ಸ್ವತಂತ್ರ ಪಕ್ಷೀಯರು ಸಭೆ ಬಿಟ್ಟು ಎದ್ದು ಹೊರಗೆ ನಡೆದರು. ೧೦ ನಿಮಿಷಗಳ ಬಳಿಕ ಒಳಗೆ ಬಂದರು.

ಬಂಗಾಳದ ದುರ್ಗಾ ಪೂಜೆ

ದುರ್ಗೆಯನ್ನು ನೀರಿಗೆ ಹಾಕುವ ಮೆರವಣಿಗೆಯ ಉತ್ಸವವು ದಿನಾಜಪುರ, ಮೈಮನ್‌ಸಿಂಗ್, ಬಜ್ ಬಜ್ ಮೊದಲಾದ ಕಡೆ ಕೂಡದೆಂಬ ಸರಕಾರದ ನಿರ್ಬಂಧಾಜ್ಞೆಯ ನಿಷೇಧಕ್ಕಾಗಿ, ಉಪವಾಸ, ಗೋಳಾಟ, ಧ್ಯಾನ, ಪ್ರಾರ್ಥನೆಗಳ ಕಾರ್ಯಕ್ರಮವುಳ್ಳ ನಿಖಿಲ ಬಂಗಾಳ ದಿನಾಚರಣೆಯು ಕಲ್ಕತ್ತೆಯಲ್ಲಿ ಜರುಗಿತು. ಹಿಂದೂಗಳ ಹಲವು ಅಂಗಡಿಗಳು ಬಂದ್ ಆಗಿದ್ದುವು.

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/-

ಅವನು ನಿರ್ಬಲನಾಗಿ, ನಿರುತ್ಸಾಹಿಯಾಗಿ, ಚೈತನ್ಯಹೀನನಾಗಿದ್ದುದರಿಂದಲೇ ಅವನು ಸೋತುಹೋದದ್ದು. ಗೆಲ್ಲಬೇಕಾದರೆ ಕುಂಬಾ ಆರೋಗ್ಯ, ಶಕ್ತಿ, ಸಹಿಷ್ಣುತೆಗಳು ಬೇಕು.

ದೇಹದ ಮಾಂಸಖಂಡಗಳನ್ನೂ, ಅಸ್ತಿಪಂಜರವನ್ನೂ ಬಲವಾಗಿ, ದೃಢವಾಗಿ ಬೆಳೆಸಲು ಅತ್ಯಗತ್ಯವಾಗಿ ಬೇಕಾದ, ವೂಲ್ಟ್ ಮತ್ತು ಕಾಳಜಸತ್ವ, ಕಬ್ಬಿಣ ಮತ್ತು ತಾಮ್ರದ ಅಂಶಗಳು ವಾಟರ್‌ಬರೀಸ್ ಕಾಂಪೌಂಡ್‌ನಲ್ಲಿ ಇವೆ. ಆದ್ದರಿಂದಲೇ ಅದು ದೇಹಕ್ಕೆ ಪುಷ್ಟಿಯನ್ನು ಕೊಟ್ಟು ಆಯಾಸವನ್ನು ತೊಲಗಿಸಿ ಜೊಸ ಚೈತನ್ಯವನ್ನುಂಟು ಮಾಡುತ್ತದೆ. ನಿಮ್ಮ ಮಕ್ಕಳಿಗೆ ವಾಟರ್‌ಬರೀಸ್ ಕಾಂಪೌಂಡಿಗಿಂತ ಉತ್ತಮವಾದ ಟಾನಿಕ್ ಇಲ್ಲ. ಈ ದಿನವೇ ಒಂದು ಸೀಸೆಯನ್ನು ಕೊಂಡುಕೊಳ್ಳಿರಿ. ಎರಡು ಸೈಜ್

೮ ಔನ್ಸ್ ಮತ್ತು ೧೬ ಔನ್ಸ್ ಸೀಸೆಗಳಲ್ಲಿ ಸಿಗುತ್ತದೆ.

ವಾಟರ್‌ಬರೀಸ್
ಕಾಂಪೌಂಡ್
ನಿಮ್ಮನ್ನು ಆರೋಗ್ಯದಲ್ಲಿಡುತ್ತದೆ NW6



ಕೊನೆಯಚ್ಚೊತ್ತು

ಬ್ರಿಟಿಷ್ ಸಬ್‌ಮೆರೈನ್‌ಗಳು ಶತ್ರುಗಳ ೧೧ ಹಡಗುಗಳನ್ನು ಮುಳುಗಿಸಿ, ನಷ್ಟಪಡಿಸಿ ಇವೆ—ಮಾಸ್ಕೋವಿನ ಕಡೆಯುದ್ಧವು ಜೋರಾಗುತ್ತಿದೆ—ಬಲ್ಗೇರಿಯದಲ್ಲಿನ ನಾಜಿ ಸಿದ್ಧತೆಗಳು ಕ್ರಿಮಿಯವನ್ನಾಕ್ರಮಿಸುವುದಕ್ಕೆಂದು ಹೇಳಲಾಗಿದೆ.

ಮಂಗಳೂರು

ಡೆಪ್ಯುಟಿ ಮಿಲಿಟರಿ ವೈಸ್ ಪ್ರೆಸಿಡೆಂಟರು

ಇದೇ ತಾ. ೧೪ರಲ್ಲಿ ಮದ್ರಾಸ್ ಕ್ಷೇತ್ರದ ಡೆಪ್ಯುಟಿ ಮಿಲಿಟರಿ ವೈಸ್ ಪ್ರೆಸಿಡೆಂಟ್, ಬೆಂಗಳೂರು ಅವರು ಬೆಳಿಗ್ಗೆ ೧೧॥ಗೆ ಇಲ್ಲಿಗೆ ತಲುಪಿ ಕದ್ರಿ ಇನಸ್ಪೆಕ್ಷನಿನ ಬಂಗಲೆಯಲ್ಲಿ ಉಳಿದುಕೊಳ್ಳುವರು. ಮರುದಿನ ಬೆಳಿಗ್ಗೆ ಅವರು ವೀರ ರಾಜೇಂದ್ರ ಪೇಟೆಗೆ ಹೊರಡುವರು. ಅವರು ತಾ. ೧೪ರಲ್ಲಿ ಏರ್ಪಡಿಸಿದರೆ, ಸ್ಥಳೀಯ ವೆಲ್ಫೇರ್ ಕಮಿಟಿಗಳವರ ಭೇಟಿ ಮಾಡುವರಲ್ಲದೆ, ಸಮುದ್ರಾಚೆ ಸರ್ವೀಸ್ ಮಾಡುತ್ತಿರುವ ಜನಗಳ ಬಂಧುಬಾಂಧವರನ್ನೂ ನೋಡಿ ಅವರ ಕಾಗದಪತ್ರ, ಕುಟುಂಬದ ಅಲಾಟ್ ಮೆಂಟುಗಳ ಕುರಿತಾದ ದೂರುಗಳನ್ನು ವಿಚಾರಿಸುವರು. ಮಾಜೀ ಸರ್ವೀಸುಗಳ ಮಂದಿಯನ್ನೂ ಕಂಡು, ಅವರು ಮೆಡಲ್ ರಿಬನ್ಸ್ ಇತ್ಯಾದಿಗಳ ಕುರಿತು ಏನಾದರೂ ಹೇಳಿಕೊಳ್ಳುವುದಿದ್ದರೆ ಅದನ್ನೂ ಕೇಳುವರು. ಅವರೆಲ್ಲ ತಮ್ಮ ಖರ್ಚಿನಿಂದ ಬಂದು ಹೋಗಬೇಕು; ತಮ್ಮ "ಡಿಸ್ಚಾರ್ಜಡ್" ಸರ್ಟಿಫಿಕೆಟನ್ನೂ ತರಬೇಕು.

ಮುನಿಸಿಪಲ್ ಸಭೆ

ನಮ್ಮ ಮುನಿಸಿಪಲ್ ಕೌನ್ಸಿಲಿನ ಸಭೆ ಇದೇ ತಾ. ೧೩ನೇ ಸೋಮವಾರ ೫॥ ಗಂಟೆಗೆ ಅದರ ಕಾರ್ಯಾಲಯದಲ್ಲಿ ನೆರೆಯುವುದು.

ದ. ಕ. ಪ್ರೆಸ್ ವರ್ಕರ್ಸ್ ಯೂನಿಯನ್ ಇದರ ಮಹಾಸಭೆ

ಮೇಲಿನ ಯೂನಿಯನಿನ ವಾರ್ಷಿಕ ಮಹಾಸಭೆಯು, (ಕನಿಷ್ಠ ಹಾಜರಿ ಸಾಲದೆ) ಇದೇ ಅಕ್ಟೋಬರ್ ತಾ. ೫ನೇ ಸಾಯಂ. ೪ ಘಂಟೆಗೆ ಜರುಗಿತು. ಆ ದಿನ ಕೂಡ ಕನಿಷ್ಠ ಹಾಜರಿಯಿಲ್ಲದುದರಿಂದ, ಪುನಃ ಅದನ್ನು ಇದೇ ಅಕ್ಟೋಬರ್ ತಾ. ೧೯ನೇ ಆದಿತ್ಯವಾರ ಸಾಯಂ. ೪ ಘಂಟೆಗೆ ಯೂನಿಯನ್ ಆಫೀಸಿನಲ್ಲಿ ಜರುಗಿಸಲು ಹಾಜರಿದ್ದ ಮಹಾಸಭೆಯ ಸದಸ್ಯರು ನಿರ್ಧರಿಸಿದ್ದಾರೆ. ಆದುದರಿಂದ ಅಕ್ಟೋಬರ್ ತಾ. ೧೯ನೇ ಆದಿತ್ಯವಾರ ಸಾಯಂ. ೪ ಘಂಟೆಗೆ ಯೂನಿಯನ್ ಆಫೀಸಿನಲ್ಲಿ ನಡೆಯುವ ಮಹಾಸಭೆಗೆ ಯೂನಿಯನಿನ ಎಲ್ಲ ಸದಸ್ಯರೂ ತಪ್ಪದೆ ಬರಬೇಕಾಗಿ ಈ ಮೂಲಕ ವಿನಂತಿಸಲಾಗಿದೆ. ಹೊಸ ವರ್ಷದ ಕಾರ್ಯಕಾರಿ ಮಂಡಲಿಯ ಸದಸ್ಯರ ಚುನಾವಣೆಗಳಾಗಬೇಕಾದುದರಿಂದ ಸಭೆಯು ಅತೀ ಮುಖ್ಯವಾದುದು. ಎಲ್ಲ ಸದಸ್ಯರೂ, ಕಾರ್ಯಕಾರೀ ಮಂಡಲಿಯ ಸದಸ್ಯರೂ, ಈ ಪತ್ರಿಕಾ ಪ್ರಕಟನೆಯನ್ನೇ ಆಮಂತ್ರಣವಾಗಿ ತಿಳಿದು, ಅಗತ್ಯವಾಗಿ ಬರಬೇಕಾಗಿ ಪ್ರಾರ್ಥಿಸುತ್ತೇನೆ ಎಂದು ದ. ಕ. ಜಿಲ್ಲಾ ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷ ಶ್ರೀ। ಕೆ. ಕೃಷ್ಣರಾವ್ ಬಿ. ಏ., ಅವರು ತಿಳಿಸುತ್ತಾರೆ.

ಗಾಂಧಿ ಜಯಂತಿ

ಕಳೆದ ತಾ. ೨ರಿಂದ ಇಲ್ಲಿ ಆರಂಭವಾದ "ಗಾಂಧಿ ಜಯಂತಿ" ಕಳೆದ ಬುಧವಾರ ತಾ. ೮ರಲ್ಲಿ ಕೊನೆಗಂಡಿತು. ಕಾರ್ಯಕ್ರಮದ ಅಂಶಗಳೆಲ್ಲ ಯಥಾವತ್ತಾಗಿ ಸಾಗಿದುವು. ಬಿಡಬಗ್ಗರಿಗೆ ತಾ. ೨ರಲ್ಲಿ ಸುಮಾರು ೨೭ ಮುಡಿ ಅಕ್ಕಿ ಹಂಚಲಾಯಿತು. ಈ ಜಯಂತಿಯ ಕಾಲದಲ್ಲಿ ತಾ. ೨ರಿಂದ ೮ರ ವರೆಗೆ ಅನುಕ್ರಮವಾಗಿ ಅಲ್ಲಲ್ಲಿ ಜರುಗಿದ ಸಾರ್ವಜನಿಕ ಸಭೆಗಳಿಗೆ ಅಧ್ಯಕ್ಷರಾದವರೂ ಭಾಷಣಕರ್ತರೂ ಇವರು:—ತಾ. ೨ ಅಧ್ಯಕ್ಷ ಡಾ। ಯು.ಪಿ. ಮಲ್ಯ; ಭಾಷಣಕರ್ತರು, ಶ್ರೀ। ಬಾಳಿಗ, ಶ್ರೀ। ಕೆ. ಶಿವರಾವ್; ತಾ. ೩ (ಅ) ಶ್ರೀ। ಕೆ. ಈಶ್ವರ, (ಭಾ) ಶ್ರೀ। ತಿಂಗಳಾಯ ಎಚ್. ಕೆ. ಬಾಳಿಗ. ತಾ. ೪(ಅ) ಶ್ರೀ। ಬಾಳಿಗ (ಭಾ) ಶ್ರೀ। ತಿಂಗಳಾಯ ಎಚ್. ಕೆ., ಪ್ರಭಾಕರ, ಸೇಟ್, ಕೆ. ಕೆ. ರೈ; ತಾ. ೫ (ಅ) ಶ್ರೀ। ಎಚ್. ಕೆ. ತಿಂಗಳಾಯ (ಭಾ) ಶ್ರೀ। ಬಾಳಿಗ, ಕೆ. ಕೃಷ್ಣರಾವ್, ಎನ್. ಕೆ. ಬಾಲಕೃಷ್ಣನ್ (ನೀಲೇಶ್ವರ) ತಾ. ೬ (ಅ) ಶ್ರೀ। ಬಿ. ಎಂ. ತಿಂಗಳಾಯ (ಭಾ) ಶ್ರೀ। ಬಾಳಿಗ, ಕೆ. ಕೆ. ರೈ; ತಾ. ೭ (ಅ) ಶ್ರೀ। ಬಾಳಿಗ (ಭಾ) ಶ್ರೀ। ಕೆ. ಈಶ್ವರ,. ತಿಂಗಳಾಯ ಎಚ್. ಕೆ. ತಾ. ೮ (ಅ) ಶ್ರೀ। ಎ. ಬಿ. ಸೆಟ್ಟಿ (ಭಾ) ಶ್ರೀ। ಎಂ. ಎಸ್. ಅಧಿಕಾರಿ, ಬಾಳಿಗ.

ತಾ. ೮ರಲ್ಲಿ ಇನಾಮುಗಳನ್ನು ಹಂಚಿದುದರಲ್ಲಿ ಅವನ್ನು ಪಡೆದವರಿವರು:—ನೂಲುವುದರಲ್ಲಿ ಒಂದನೇ ಬಹುಮಾನ ಶ್ರೀ। ಡಿ. ರತ್ನ; ಎರಡನೆಯದು ಸರಸ್ವತೀ ಪದ್ಮನಾಭ ಮಲ್ಯ; ತಕ್ಲಿ ನೂಲುವಿಕೆಯಲ್ಲಿ ಸಂಭಾವನೆ ಬಹುಮಾನ ಎಚ್. ರತ್ನ ಹಿಂದೀ ವಾಕ್ ಸ್ಪರ್ಧೆಯಲ್ಲಿ ೧ನೇ ಬಹುಮಾನ ಎಂ. ವೆಂಕಟೇಶ ಪ್ರಭು, ೨ನೆಯದು ಶ್ರೀನಿವಾಸ


ಬಲ್ಲಪ್ಪ ಮತ್ತು ಒಲ್ಲಪ್ಪ
ಸಭೆ ಕೂಡುವ ವೇಳೆಯಾಯ್ತು. ನಿನ್ನ ನೋಟ್ಸ್‌ಗಳು ಇನ್ನೂ ತಯಾರಾಗಿಲ್ಲವೇ?
ನನ್ನ ನೋಟ್ಸ್‌ಗಳೋ ನನ್ನ ಬುದ್ಧಿಯಂತೆ ಅವು ಗಲಿಬಿಲಿಯಾಗಿವೆ ನೀನು ಸಹಾಯಮಾಡದಿದ್ದರೆ ಈ ಸಭೆಯ ಮುಂದೆ ನಿಲ್ಲಲು ನನ್ನಿಂದಾಗದು ನಿನ್ನ ಹಾಗೆಯೇ ನಾನು ಚುರುಕಾಗಿಯು, ಸ್ಪಷ್ಟವಾಗಿಯೂ ಯೋಚಿಸ ಬಲ್ಲವನಾಗದಿದ್ದರೆ.
ನಿನ್ನ ಬುದ್ಧಿಯು ಸ್ವಚ್ಛವಾಗಿಯೂ, ಚುರುಕಾಗಿಯೂ ಇಲ್ಲದಿದ್ದರೆ ಸಾಮರ್ಥ್ಯತೆಯಿಂದಲು, ಜಾಗ್ರತೆಯಾಗಿಯೂ ಕೆಲಸಮಾಡಲು ಅಸಾಧ್ಯ. ನನ್ನ ಹಾಗೆ ನೀನೂ ಪ್ರತಿ ಬೆಳಿಗ್ಗೆ.
ಈನೊಸ್
"ಫ್ರೂಟ್ ಸಾಲ್ಟ್"
ತಿಗೆದುಕೊಂಡು ದಿನವೆಲ್ಲ ಬುದ್ಧಿಭ್ರಮೆಯಿಲ್ಲದೆ ಚುರುಕಾಗಿರಬೇಕು.
ಬೆಳಿಗ್ಗೆ ಎದ್ದಕೂಡಲೆ ಒಂದು ಲೋಟ ತಿಳಿಯಾದ ಈನೊಸ್ ಫ್ರೂಟ್‌ಸಾಲ್ಟ್ ಸೇವಿಸಿದರೆ ನಿಮ್ಮ ಬುದ್ಧಿಯು ಸ್ವಚ್ಛವಾಗಿಯೂ, ಚುರುಕಾಗಿಯೂ ಇರುವುದು. ಯಾಕಂದರೆ ಈನೊಸ್ ಆಹಾರವೃತ್ತಿಗಳ ಆಜಾಗರೂಕತೆಯಿಂದುಂಟಾದ ಸಣ್ಣ ಶಾರೀರಿಕ ಅನ್ಯವಸ್ಥೆಗಳಾದ ತಲೆನೋವು, ಸ್ವೈತ್ಯ, ಅಜೀರ್ಣ, ಮಲಬದ್ಧತೆ ಇದನ್ನೆಲ್ಲಾ ದೂರ ಮಾಡುತ್ತದೆ. ಆರೋಗ್ಯವಾದ ಶರೀರವು, ಚುರುಕಾದ ಬುದ್ಧಿಯೂ, ನಿಮ್ಮದಾಗುವುದು.
ವಾಯು ಸಂಚಾರಕ್ಕೆ ಅವಕಾಶಕೊಡದ ಒರಟಿಗಳುಳ್ಳ ಶೀಸೆಗಳಲ್ಲಿಯೇ ಮಾರಲ್ಪಡುವುದರಿಂದ ಶೀಸೆಯನ್ನು ತೆರದ ಮೇಲೂ ಈನೊಸಿನ ಉಲ್ಲಾಸವು ಕಾಪಾಡಲ್ಪಡುತ್ತದೆ. ಡಬ್ಬಿಗಳಲ್ಲಿ ಮಾರಲ್ಪಡುವುದಿಲ್ಲ. ಸಣ್ಣ ಸೈಜಿನ ಶೀಸದ ಬೆಲೆ ಆರಾಣೆಯಷ್ಟು ಮಾತ್ರ.
ENO
1385

ನೋಟೀಸು

ತೆಂಕ ಎಡಪದವು ಪಂಚಾಯತ ಕೋರ್ಟಿನಲ್ಲಿ.

ಸಿವಿಲ್ ವ್ಯಾಜ್ಯದ ನಂಬ್ರ 2/1941.

ಶ್ರೀನಿವಾಸ ಭಟ್ಟ–ಗುರ್ವುರ. ಸುಬ್ರಾಯ ಭಟ್ರ ಮಗ, ಮಂಗಳೂರು ತಾಲೂಕು ತೆಂಕ ಎಡಪದವು ಗ್ರಾಮದಲ್ಲಿರುವವ

—ವಾದಿ

ಕರೀಮು ಸಾಹೇಬ–ವಡ್ರಬೆಟ್ಟು ರಹಿಮಾನ್ ಸಾಹೇಬರ ಮಗ, ಸದ್ರಿ ತೆಂಕ ಎಡಪದವು ಗ್ರಾಮದಲ್ಲಿರುವವ

—ಪ್ರತಿವಾದಿ

ಇವರೊಳಗೆ

ಮೇಲ್ಕಂಡ ವ್ಯಾಜ್ಯವನ್ನು ಈ ಕೋರ್ಟಿನಲ್ಲಿ ತಾ. 25—10—41ಕ್ಕೆ ತನ್ನಿಗೆ ಇಟ್ಟಿರುವುದರಿಂದ ಪ್ರತಿವಾದಿಯು ಸದ್ರಿ ದಿವಸಕ್ಕೆ ನಮ್ಮ ಮುಂದೆ ಸ್ವತಹಾ ಯಾ ಆತನಿಂದ ಬರಹ ಮೂಲಕ ಅಧಿಕಾರ ಹೊಂದಿದ ಮುತಾಲಿಕನಾಗಲಿ ಕೋರ್ಟಿಗೆ ಹಾಜರಾಗಿ ಅಗತ್ಯವುಳ್ಳ ರುಜುವಾತುಗಳನ್ನು ಹಾಜರುಪಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಯಂ. ಪಿ. ರಾಮ ರಾವ್,
ಪ್ರೆಸಿಡೆಂಟ್.

ಪೊಕ್ಕಾ: ತೆಂಕ ಎಡಪದವು ತಾ. 10-10-41.

ಬೋರ್ಕರ್; ಕನ್ನಡ ವಾಕ್ ಸ್ಪರ್ಧೆ ೧ನೇ ಬಹುಮಾನ ಕೆ. ಶಿವರಾವ್, ೩ನೆಯದು ಬಿ. ಎಂ. ಇದ್ದಿನಬ್ಬ (ಇವರು ಮುಸ್ಲಿಮರು.)

ಗ್ರಾಮ ಕೈಗಾರಿಕೆ ಪ್ರದರ್ಶನದಲ್ಲಿ ಮರದ ಕೆತ್ತನೆ ಕೆಲಸಕ್ಕೆ ಶ್ರೀ। ದೇಲಂಪಾಡಿ ಸುಬ್ರಾಯ ತಂತ್ರಿ, ಕೊಂಬಿನ ಬಾಚಣಿಗೆಗೆ ವಾಸುದೇವ ನಾಯ್ಕ ನಂದಾವರ, ಮಣ್ಣಿನ ಕೆಲಸ ಇತ್ಯಾದಿಗಳಿಗೆ ಪೂವಪ್ಪ ಬೆಲ್ಚಡ ಅಂಡ್ ಸನ್ಸ್ ಇವರಿಗೆಲ್ಲ "ಸರ್ಟಿಫಿಕೆಟ್ ಆಫ್ ಮೆರಿಟ್" ಕೊಡಲಾಗಿದೆ.

ಡಾ। ಠಾಗೂರರ ಭಾವಚಿತ್ರ ಅನಾವರಣ ಮಹೋತ್ಸವ

ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕಳೆದ ಆದಿತ್ಯವಾರ ಸಂಜೆ ಡಾ। ರವೀಂದ್ರನಾಥ ಠಾಗೂರರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಶ್ರೀ। ಎಸ್. ಆರ್. ಹಳದೀಪುರ ಕರ್ ಎಂ. ಎಲ್. ಸಿ. ಇವರು ನೆರವೇರಿಸಿದರು.

ಮಿ। ಡಫ್. ಕೂಪರರು

ಮಿ। ಡಫ್. ಕೂಪರರು, ಬರ್ಮದ ಮೇಮಯವನ್ನು ನೋಡಿಕೊಂಡು, ರಂಗೂನಿಗೆ ಬಂದರು. ಮೇಂಡಲೆ ಮೊದಲಾದ ಕಡೆ ನೋಡತಕ್ಕುದನ್ನೆಲ್ಲ ನೋಡಿದರು. ಪೂರ್ವ ದೇಶಗಳ ಸಿದ್ಧತೆಗಳ ವಿಚಾರದಲ್ಲಿ ತೃಪ್ತಿ ಸೂಚಿಸಿದರು. ಇವರಿನ್ನು ಸಿಮ್ಲಕ್ಕೆ ಈ ವಾರಕ್ಕೆ ದಯ ಮಾಡಿಸುವರು. ಅಲ್ಲಿ ನಮ್ಮ ವೈಸರಾಯ್ ಮತ್ತು ಸರ್ವ ಸೇನಾಪತಿಗಳೊಡನೆ ಸಂಭಾಷಣೆ ಬೆಳಸುವರು. ಸಂಭಾಷಣೆಯ ವಿಷಯಗಳೇನೆಂಬುದು ಗುಪ್ತವಾಗಿ ಇರಿಸಲ್ಪಟ್ಟಿದೆ. ನ್ಯಾಶನಲ್ ಡಿಫೆನ್ಸ್ ಕೌನ್ಸಿಲಿನ ಮೆಂಬರರಿಗೂ ಇವರಿಗೂ ಭೇಟಿಯಾಗುವ ಏರ್ಪಾಡೂ ಇರುವಂತಿಲ್ಲ. ಒಂದು ವೇಳೆ ಈ ಭೇಟಿಯ ವಿಚಾರಗಳು ಈ ತಿಂಗಳ ಅಂತ್ಯದಲ್ಲಿ ಪ್ರಕಟವಾಗಬಹುದೆಂದು ಸೂಚಿಸಲಾಗಿದೆ.

ಆಸ್ಟ್ರೇಲಿಯದ ಹೊಸ ಮಂತ್ರಿಮಂಡಲ

ಆಸ್ಟ್ರೇಲಿಯದಲ್ಲಿ ಹೊಸತಾಗಿ ಲೇಬರ ಮಂತ್ರಿಮಂಡಲವೊಂದು ಸ್ಥಾಪನೆಯಾಗಿದೆ. ಪ್ರಧಾನರಾದ ಮಿ। ಕರ್ಟನರು ರಕ್ಷಣಾ ಕಾರ್ಯದ ಮಂತ್ರಿಗಳೂ ಆಗಿದ್ದಾರೆ.

ವಾರ್ತಾಗುಚ್ಛ

ಕ್ರೋಷಿಯಾ ಸಂಸ್ಥಾನದಲ್ಲಿ!

ಕ್ರೋಷಿಯದಲ್ಲಿ ನಾಜಿಗಳು ಡಾ। ಮೆಟ್‌ಚಕ್ಕರನ್ನು ಅಲ್ಲೊಂದು ಕೈಗೊಂಬೆ ಸರಕಾರದ ಸ್ಥಾಪನೆಗಾಗಿ ಒತ್ತಾಯ ಪಡಿಸುತ್ತಿರುವರೆಂದು ಸುದ್ದಿ. ಇದು ಹೌದಾದರೆ, ಈಗಿನ ಕೈಗೊಂಬೆ ಸರ ಕಾರದ ಪ್ರಭುವಾದ ಪೇವ್ಲಿಚಿನ ಆಡಳಿತವು ವ್ಯರ್ಥವೆಂದು ಅರ್ಥ. ಈತನು ಯುಗೋಸ್ಲಾವಿಯದ ಒಂದನೇ ಅಲೆಕ್ಸಾಂಡರನನ್ನು ಕೊಲ್ಲಿಸಿ, ಹಿಟ್ಲರಿನ ದಯೆಯಿಂದ ಕ್ರೋಷಿಯದ ಪ್ರಭುವಾದವನು ಇವನು ಅಲ್ಲಿ ಮೊದಲು ಭಯೋತ್ಪಾದಕರ ಒಂದು ಗುಂಪಿನ ನಾಯಕ; ಸರ್ವಿಯರು, ಯೆಹೂದಿಗಳು, ಕ್ರೋಷಿಯದ ರೈತರು ಇವರನ್ನೆಲ್ಲ ದ್ವೇಷಬುದ್ಧಿಯಿಂದ ಕಂಡು ಇಟಲಿ, ಹಂಗೆರಿ ಮತ್ತು ಜರ್ಮನಿಯ ಹಣದಿಂದ ಯುಗೋಸ್ಲಾವಿಯವನ್ನು ಒಡೆದವನು. ಆದರೆ ಇವನು ಪ್ರಭುವಾದ ಬಳಿಕ, ಅಲ್ಲಿ ಅಶಾಂತಿ ಹೆಚ್ಚಿದುದರಿಂದ, ನಾಜಿಗಳು, ಯುಗೋಸ್ಲಾವಿಯದ ರಾಜನೀತಿಮಂಡಲದಲ್ಲಿ "ದೇಶಾಭಿಮಾನಿ" ಎಂದು ಪ್ರಸಿದ್ಧನಾದ. ೪೫ ಲಕ್ಷ ಕ್ರೋಟದ ಪ್ರಜೆಗಳಿಗೆ ಪ್ರೀತಿಪಾತ್ರನಾದ ಡಾ। ಮೆಟ್‌ಚಕ್ಕನನ್ನು ಅಲ್ಲಿನ ಪ್ರಭುವಾಗಬೇಕೆಂದು ಅಪೇಕ್ಷಿಸಿದ್ದಾರೆ. ಆದರೆ ಯುಗೋಸ್ಲಾವಿಯದ ಸ್ವಾತಂತ್ರ್ಯವನ್ನು ಬಯಸುತ್ತಿರುವ ಈ ಡಾಕ್ಟರನು ನಾಜಿಗಳ ಕೈಗೊಂಬೆಯಾಗಿ ಆಳುವುದು ಅಸಂಭವವಾಗಿ ತೋರುತ್ತಿದೆ.

ಗ್ರೀಸಿನಲ್ಲಿ

ಗ್ರೀಸಿನಲ್ಲಿ ಆಹಾರಸಾಧನಗಳ ಅಭಾವ ಹೆಚ್ಚಿದೆ. ಜರ್ಮನರು ಅಲ್ಲಿನ ವರಿಗೆ ಬಹಳ ಉಪಟಳ ಕೊಡುತ್ತಿದ್ದಾರೆ. ಆದರೂ ಧೈರ್ಯಶಾಲಿಗಳಾದ ಗ್ರೀಕರು ತಮ್ಮ ಗೊರಿಲ್ಲಾ ಕಾದಾಟದಿಂದ ಇನ್ನೂ ಇಟಲಿ ಸೈನಿಕರಿಗೆ ವಿಶೇಷವಾದ ತೊಂದರೆ ಕೊಡುತ್ತಿದ್ದಾರೆ. ತಮಗೆ ಅನ್ನವಿಲ್ಲದಿದ್ದರೂ ಚಿಂತ್ಯವಿಲ್ಲ, ಜರ್ಮನರಿಗೆ ಆಹಾರಸಾಧನಗಳು ಅಲ್ಲಿ ದೊರೆಯಬಾರದೆಂದು ಧ್ರೀಸಿನ ಬಳಿಯ ಬೆಳೆಗಳನ್ನೆಲ್ಲ ಸುಟ್ಟುಹಾಕಿದ್ದಾರೆ. ಈಗ ಬ್ರಿಟನು ಗ್ರೀಸಿನವರ ಉಪಯೋಗಕ್ಕಾಗಿ ೫೦ ಸಾವಿರ ಟನ್ ಆಹಾರಸಾಧನಗಳನ್ನು ಗ್ರೀಸಿಗೆ ಕಳುಹಲೊಪ್ಪಿದೆ.

ಅಬಿಸೀನಿಯದ ಭವಿಷ್ಯ

ಅಬಿಸೀನಿಯಾ ದೇಶಕ್ಕೂ ಬ್ರಿಟನಿಗೂ ಒಂದು ಮೈತ್ರಿಯ ಸಂಧಿಯಾಗಲಿದೆ; ಆ ಸಂಧಿಯ ಷರತ್ತುಗಳನ್ನು ಈಗ ಸಿದ್ಧಗೊಳಿಸಲಾಗುತ್ತಿದೆ ಎಂದು ಕಾಮನ್ಸ್ ಮಂದಿರದ ನಡವಳಿಕೆಗಳಿಂದ ತಿಳಿದುಬಂದಿದೆ. ಅಲ್ಲದೆ ಸದ್ಯವೇ ಅದೇ ಸಭೆಯಲ್ಲಿ ಬ್ರಿಟನಿನ ಮನುಷ್ಯ ಶಕ್ತಿಯ ವಿಮರ್ಶೆಯೂ ನಡೆದು, ಅದನ್ನು ಅತ್ಯುತ್ತಮ ರೀತಿಯಲ್ಲಿ ಹೇಗೆ ಉಪಯೋಗಿಸಿಕೊಳ್ಳಬಹುದೆಂಬ ಕುರಿತು ಬ್ರಿಟಿಷ್ ಮಂತ್ರಿಗಳು ಸಮಾಲೋಚಿಸುವರೆಂದೂ ಗೊತ್ತಾಗಿದೆ.

ಕಲ್ಕತ್ತಾ ಜಪಾನಿ ಕ್ಲಬ್ಬು

ಕಲ್ಕತ್ತೆಯ ಜಪಾನಿಯ ಕ್ಲಬ್ಬಿನಲ್ಲಿ ಬಹುಮಂದಿ ಈ ತಿಂಗಳ ಅಂತ್ಯದೊಳಗಾಗಿ ಜಪಾನಿಗೆ ಹೊರಡುವುದರಿಂದ ಅಲ್ಲಿನ ಮುಖ್ಯವಾದ ನಿಪ್ಪೋನ್ ಕ್ಲಬ್ ನವೆಂಬರದಿಂದ ಮುಚ್ಚಲಾಗುವುದು.

ರಷ್ಯಾ ಯುದ್ಧದಲ್ಲಿ ಜರ್ಮನರ ನಷ್ಟ

ಜರ್ಮನಿಯ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಮೃತರ ಪಟ್ಟಿಯಿಂದ ಈಗ ರಷ್ಯದಲ್ಲಿ ಜರ್ಮನರಿಗಾಗಿರುವ ನಷ್ಟದ ಅಂದಾಜನ್ನು ಕಂಡುಹಿಡಿಯಲು ಯತ್ನಿಸಲಾಗಿದೆ. ಒಂದೇ ವಾರದಲ್ಲಿ ಜರ್ಮನಿಗಾದ ಜನನಷ್ಟ ೬೬ ಸಾವಿರ, ೧೩ ವಾರಗಳ ರಷ್ಯದ ಯುದ್ಧದಲ್ಲಿ ಜರ್ಮನಿಗೆ ೧,೧೦೦,೦೦೦ರಷ್ಟು ಜನನಷ್ಟವಾಗಿದೆ ಎಂದು ಅಂದಾಜು ಹಾಕಲಾಗಿದೆ. ಇಷ್ಟು ಭಾರೀ ನಷ್ಟ ಹಿಂದೆ ಜರ್ಮನಿಗೆ ಯಾವ ಯುದ್ಧದಲ್ಲಿಯೂ ಆಗಿರಲಿಲ್ಲ.

ಮಾಸ್ಕೋವಿನ ಕಾನ್ಫರೆನ್ಸು ಮುಗಿಯಿತು

ರಷ್ಯಕ್ಕೆ ಅತ್ಯಧಿಕ ಸಹಾಯನೀಡುವ ಉದ್ದೇಶಕ್ಕಾಗಿ ಮಾಸ್ಕೋವಿನಲ್ಲಿ ಸೇರಿದ್ದ ೩ ರಾಷ್ಟ್ರಗಳ ಸಭೆ ಈಗ ಮುಗಿದಿದೆ. ಈ ರಾಷ್ಟ್ರಗಳೆಲ್ಲ ಈ ಯುದ್ಧದಲ್ಲಿ ಸಹಕರಿಸಿ ನಡೆಯುವಂತೆ ನಿರ್ಧಾರವಾಗಿದೆ. ಪರಸ್ಪರ ಸಹಾಯವು ಈ ಕಾನ್ಫರೆನ್ಸಿನ ಮುಖ್ಯ ತೀರ್ಮಾನ.

ಲಾವಲರೆ ಪ್ರಾಣಾಪಹಾರಕ್ಕೆ ದಂಡನೆ

ಲಾವಲ್ ಮತ್ತು ಡಿಟ್ ರನ್ನು ಮಾರ್ಸೆಲಿಯಲ್ಲಿ ಕಳೆದ ಅಗೋಸ್ತಿನಲ್ಲಿ ಗುಂಡಿನಿಂದ ಹೊಡೆದ ೨೧ ವರ್ಷದ ಕೊಲೆಟ್ಟ ಎಂಬ ನಾವಿಕನಿಗೆ ಮರಣದಂಡನೆಯಾಗಿದ್ದರೂ ಮಾರ್ಶಲ್ ಪೆಟೆರು ಅದನ್ನು ತಗ್ಗಿಸಿ ಜನ್ಮಾವಧಿ ಸಜೆ ವಿಧಿಸಿದ್ದಾರೆ.

ಚೀನದ ಕಷ್ಟನಿವಾರಣೆಗಾಗಿ

ಚೀನದವರ ಕಷ್ಟನಿವಾರಣೆಗಾಗಿ ಬ್ರಿಟಿಶ್ ಸರಕಾರ ೫೦ ಸಾವಿರ ಪೌಂಡುಗಳ ಸಹಾಯಧನ ಕೊಡಲೊಪ್ಪಿದೆ.

ಎಚ್ಚರಿಕೆಯಿಂದಿರಿ — ಕತ್ತಲೆಯಲ್ಲಿ ಅಪಾಯವು ಕಾದಿರುವುದು

EVEREADY
TRADE MARK
FLASHLIGHTS, BATTERIES & BULBS

ಯಾವಾಗಲೂ ಕತ್ತಲಲ್ಲಿ ಅವಿತುಕೊಂಡಿರುವ ಅಪಾಯಗಳನ್ನು ಎದುರಿಸಲು ಸಿದ್ಧವಾಗಿರಿ. ನಿಮ್ಮ ಅತ್ಯುತ್ತಮ ರಕ್ಷಣೆಯೆಂದರೆ ತಾಜಾ ಎವರೆಡಿ ಬ್ಯಾಟರಿಗಳು ಮತ್ತು ಬಲ್ಬಿನಿಂದ ಕೂಡಿರುವ ಎವರೆಡಿ ಫ್ಲ್ಯಾಶ್‌ಲೈಟು. ಅವನ್ನು ಜೊತೆಯಲ್ಲಿ ಉಪಯೋಗಿಸಿದರೆ ಅವು ಅತ್ಯಂತ ಶುಭ್ರವಾದ ಪ್ರಕಾಶವನ್ನೂ ದೀರ್ಘಕಾಲದ ಸೇವೆಯನ್ನೂ ಕೊಡುತ್ತವೆ.

EN 24

...ಅವು ಬಹುಕಾಲ ಬಾಳಿಕೆ ಬರುವುವು

ಡ ಜಿಲ್ಲೆಯ ನೆರೆ ಸಂಕಷ್ಟ ನಿವಾರಣೆ

ಮುಂಬಯಿ ಮೇಯರ ಫ್ಲಡ್ ರಿಲೀಫ್ ಫಂಡಿನಿಂದ ಹೆಚ್ಚಿನ ಸಹಾಯ

ಮುಂಬಯಿ ಸಂಯುಕ್ತ ಕರ್ನಾಟಕ ಸಂಘದವರು, ಮುಂಬಯಿ ಮೇಯರರ ಕಡೆಗೆ ಆಗಸ್ಟ ತಿಂಗಳ ಕೊನೆಗೆ, ದಕ್ಷಿಣ ಕನ್ನಡ ಜಿಲ್ಲೆಯ ನೆರೆಹಾವಳಿಯ ಸಂಕಷ್ಟ ನಿವಾರಣೆಯ ವಿಷಯದಲ್ಲಿ ಒಯ್ದ ಶಿಷ್ಟ ಮಂಡಳದ ಪ್ರಯತ್ನಗಳ ಫಲವಾಗಿ ಮೇಯರ ಫ್ಲಡ್ ರಿಲೀಫ್ ಕಮಿಟಿಯವರು ಕಳೆದ ಸಪ್ಟಂಬರ ತಿಂಗಳ ತಮ್ಮ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಾಗಿ ೫೦೦೦ ರೂಪಾಯಿಗಳನ್ನು ಮಂಜೂರ ಮಾಡಿದರು. ಹಾಗೂ ಮುಂಬಯಿ ಸಂಯುಕ್ತ ಕರ್ನಾಟಕ ಸಂಘದ ಅಧ್ಯಕ್ಷರಾದ ದಿವಾನ ಬಹಾದ್ದೂರ ರಾಜ ಕಾರ್ಯಪ್ರಸಕ್ತ ಕೆ. ರಾಮಸ್ವಾಮಿಯವರನ್ನೂ, ಗೌರವ ಕಾರ್ಯದರ್ಶಿಗಳಾದ ಶ್ರೀ. ಜಿ. ಕೆ. ಬೆಟಗೇರಿಯವರನ್ನೂ ಕಮಿಟಿಯ ಸಭಾಸದರನ್ನಾಗಿ ಆರಿಸಿಕೊಂಡರು. ಈ ೫೦೦೦ ರೂಪಾಯಿಗಳು ಈಗಾಗಲೇ ಮಂಗಳೂರಿನ ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಕಳುಹಿಸಿಕೊಡಲ್ಪಟ್ಟಿವೆ. ಮೊನ್ನೆ ಅಕ್ಟೋಬರ ೧ನೇ ತಾರೀಖಿನ ದಿನ ಜರುಗಿದ ಮೇಯರ ಫ್ಲಡ್ ರಿಲೀಫ್ ಕಮಿಟಿಯ ಸಭೆಗೆ ಶ್ರೀ. ಬೆಟಗೇರಿಯವರು ಹೋಗಿದ್ದರು. ಸದ್ಯಕ್ಕೆ ಫಂಡಿನಲ್ಲಿದ್ದ ೧೫೦೦೦ ರೂಪಾಯಿಗಳನ್ನು ಹಂಚುವ ಪ್ರಶ್ನೆಯು ವಿಚಾರಕ್ಕಾಗಿ ಬಂದಿತು. ೧೫೦೦೦ ರೂಪಾಯಿ ಗುಜರಾತಕ್ಕೂ ೩೦೦೦ ರೂಪಾಯಿ ಮಲಬಾರಕ್ಕೂ ಹಂಚಬೇಕೆಂಬ ಮುಖ್ಯ ಸೂಚನೆಯು ಸಭೆಯ ಮುಂದಿಡಲ್ಪಟ್ಟಿತು. ಆಗ್ಗೆ ಶ್ರೀ. ಬೆಟಗೇರಿಯವರು ಎದ್ದು ನಿಂತು ದಕ್ಷಿಣ ಕನ್ನಡ ಜಿಲ್ಲೆಯ ಸಂಕಷ್ಟಗಳನ್ನೂ ಬಡತನವನ್ನೂ ವರ್ಣಿಸಿ ಕನಿಷ್ಟ ಪಕ್ಷಕ್ಕೆ ೩೦೦೦ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಲೇ ಬೇಕೆಂದು ಪ್ರತಿವಾದಿಸಿದರು. ಹಾಗೂ ಗುಜರಾತಕ್ಕೆ ಇತರ ಮಾರ್ಗಗಳಿಂದ ದೊರೆತಿರುವ ಲಕ್ಷಗಟ್ಟಲೆ ಹಣದ ಸಹಾಯವನ್ನು ಲಕ್ಷ್ಯದಲ್ಲಿ ತಂದು ಕೊಂಡು ಹಣಹಂಚುವ ವಿಚಾರಮಾಡ ಬೇಕೆಂದು ಬಿನ್ನವಿಸಿಕೊಂಡರು. ಈ ಬಗ್ಗೆ ಬಹು ವೇಳೆ ಚರ್ಚೆಯಾಗಿ ಕೊನೆಗೆ ೧೦೦೦೦ ರೂಪಾಯಿಗಳನ್ನು ಗುಜರಾತಕ್ಕೂ, ೩೦೦೦ ರೂಪಾಯಿಗಳನ್ನು ಮಲಬಾರಕ್ಕೂ ೨೦೦೦ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೂ ಹಂಚಬೇಕೆಂಬ ಉಪಸೂಚನೆಯು ಸ್ವೀಕೃತವಾಯಿತು; ಮತ್ತು ಈ ಹಣವನ್ನು ಮಂಗಳೂರಿನ ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಕೂಡಲೆ ಕಳುಹಿಸಿ ಕೊಡಬೇಕೆಂದು ನಿರ್ಧಾರವಾಯಿತು. ಈ ರೀತಿ ದಕ್ಷಿಣ ಕನ್ನಡ ಜಿಲ್ಲೆಗೆ ಮೇಯರ ಫಂಡಿನಿಂದ ಒಟ್ಟು ೪೦೦೦ ರೂಪಾಯಿಗಳು ಈ ವರೆಗೆ ದೊರೆತಂತಾಯಿತು. ಹೆಚ್ಚು ಹಣ ಕೂಡಿಸುವ ಬಗ್ಗೆ ಮುಂಬಯಿ ಸಂಯುಕ್ತ ಕರ್ನಾಟಕ ಸಂಘದ ಪ್ರಯತ್ನಗಳು ಬಲವಾಗಿ ನಡೆದಿವೆ.

ಶರೀರ ಲಾವಣ್ಯವೇ

ಸ್ತ್ರೀಯರು ಆಕರ್ಷಣೀಯ ರಾಗಲು ಮುಖ್ಯ ಸಾಧನ. ಮೈಸೂರು ಸ್ಯಾಂಡಲ್ ಸೋಪು

ಸೌಂದರ್ಯಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಬಗೆಹರಿಸಿದೆ. ಸುವಾಸನಾಯುಕ್ತವಾದ ಮೈಸೂರು ಗಂಧದೆಣ್ಣೆಯಿಂದ ದಿವ್ಯವಾಗಿ ಪರಿಮಳಿತವಾಗಿರುವ ಈ ಸಾಬೂನಿನ ಉಪಯೋಗದಿಂದ ಆವಶ್ಯಯವಾನರಾಗುವುದು ಅತಿ ಸುಲಭ.

ಬೆಳಗ್ಗೆ ಎದ್ದ ಕೂಡಲೆ ಒಂದು ಸಾರಿ, ರಾತ್ರಿ ಮಲಗುವುದಕ್ಕೆ ಮುಂಚೆ ಮತ್ತೊಂದು ಸಾರಿ—ಈ ರೀತಿ ಈ ಸೋಪನ್ನು ಉಪಯೋಗಿಸುತ್ತಾ ಬಂದಲ್ಲಿ ಅಂಗಸೌಷ್ಠವವೂ, ಶರೀರಲಾವಣ್ಯವೂ ಪುಷ್ಟಿಗೊಳ್ಳುವುವು.

ಎಲ್ಲ ಕಡೆಯೂ ದೊರೆಯುತ್ತದೆ

ಮೈಸೂರು ಸ್ಯಾಂಡಲ್ ಸೋಪು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ನಿಖಿಲ ಕರ್ನಾಟಕ ವೈದ್ಯ ಸಮ್ಮೇಲನ

"೧೯೪೬ನೆಯ ನಿಖಿಲ ಕರ್ನಾಟಕದ ವೈದ್ಯ ಸಮ್ಮೇಳನವನ್ನು ನಂದಿಯಲ್ಲಿ ಕೂಡಿಸಬೇಕೆಂದು ಪ್ರಯತ್ನಿಸಿರುವಲ್ಲಿ ಕೆಲವು ಅನಿವಾರ್ಯಗಳ ನಿಮಿತ್ತ ಈ ಸಲಕ್ಕೆ ಅಲ್ಲಿ ಸಾಧ್ಯವಾಗಲಾರದೆಂದು ಕಂಡು ಬಂದುದರಿಂದ ಅದನ್ನು ಮೈಸೂರಿಗೇ ಆಹ್ವಾನಿಸಿ ಬರುವ ಡಿಸೆಂಬರ್ ತಿಂಗಳಲ್ಲಿಯೇ ಆ ಸಮ್ಮೇಳನವನ್ನು ಮತ್ತು ಮೈಸೂರು ಸಂಸ್ಥಾನದ ಪ್ರಥಮ ವೈದ್ಯ ಸಮ್ಮೇಳನವನ್ನೂ ರಾಜಧಾನಿಯಲ್ಲಿ ನಡೆಯಿಸತಕ್ಕದೆಂದು ಸ್ಥಳೀಯ ವೈದ್ಯ ಸಂಘವು ತೀರ್ಮಾನಿಸಿದೆ.

"ಕಾರ್ಯನಿರ್ವಾಹಕ್ಕಾಗಿ ಸುಪ್ರಾತಿನಿಧ್ಯ ಉಳ್ಳ ಸ್ವಾಗತ ಸಮಿತಿಯು ಏರ್ಪಟ್ಟು ಸಮ್ಮೇಳನದ ಪೂರ್ವಸಿದ್ಧತೆಗಳು ಪ್ರಾರಂಭವಾಗಿರುತ್ತವೆ.

"ಕರ್ನಾಟಕದ ಎಲ್ಲ ವೈದ್ಯರೂ ವೈದ್ಯಾಭಿಮಾನಿಗಳೂ ಸಹಕರಿಸಿ ಸಮ್ಮೇಳನಗಳನ್ನು ಯಶಸ್ವಿಯನ್ನಾಗಿ ಮಾಡಬೇಕಾಗಿಯೂ ಹೆಚ್ಚು ವಿಚಾರಗಳಿಗಾಗಿ ಸಮ್ಮೇಳನದ ಆಫೀಸು, 3, ವಾಣಿ ವಿಲಾಸ, ಮಾರ್ಕೆಟು ಬಿಲ್ಡಿಂಗ್ಸ್, ಮೈಸೂರು ಎಂಬ ಅಡ್ರೆಸ್ಸಿಗೆ ದಯಮಾಡಿ ಬರೆದುಕೊಳ್ಳಬೇಕಾಗಿಯೂ ವಿನಂತಿಯಿದೆ," ಎಂದು ಜಂ। ಸೆಕ್ರೆಟರಿ ಡಾ। ವೈ. ಲಕ್ಷ್ಮೀನರಸಿಂಹ ಶಾಸ್ತ್ರಿಗಳು ತಿಳಿಸುತ್ತಾರೆ.

ಈಗಾಗಲೇ ಈ ಸಮ್ಮೇಳನವು ಬಿಜಾಪುರದಲ್ಲಿ ನಡೆಯಲಿದೆಯೆಂದು ಯೋಚಿಸಿ ಪ್ರಕಟಿಸಿದ್ದುದನ್ನು ರದ್ದುಪಡಿಸಿ ಮೈಸೂರಿನಲ್ಲಿ ನಡೆಯಿಸಲು ಬಿಜಾಪುರದಿಂದ ಅಧ್ಯಕ್ಷರ ಅಪ್ಪಣೆ ದೊರೆತಿದೆ.

ವಿಮಾನ ಬಲದಲ್ಲಿ ಬ್ರಿಟಿಷ್ ಹುಡುಗಿಯರು

ಬ್ರಿಟನಿನ ಮಹಿಳೆಯರ ಸಹಾಯಕ ವಿಮಾನ ಬಲದ ಹುಡುಗಿಯರಿವರು ಉಲ್ಲಾಸಚಿತ್ತರಾಗಿ ಈಗ ತಾನೇ ವಿಮಾನ ಶಿಕ್ಷಣ ಪಡೆಯಲುಳ್ಳ ಹೊಸ "ರಿಕ್ರೂಟ್"ಗಳಿಂದ ಮೆಚ್ಚಿಕೆಯ ಮುಗುಳ್ನಗವನ್ನು ಆಕರ್ಷಿಸುತ್ತಿದ್ದಾರೆ. ಆರು ವಾರಗಳ ಹಿಂದೆ, ಈಗ ಚೆನ್ನಾಗಿ ತರಬೇತಾದ ಈ ತಂಡದವರು, ಆಗ ತಾವೇ ಈ ಸರ್ವೀಸಿಗೆ ಹೊಸಬರಾಗಿದ್ದರು.

ಇಂಡಿಯದ ವಿದ್ಯಮಾನಗಳು

ಇಂಡಿಯದ ವಿದ್ಯಮಾನಗಳಲ್ಲೇನೂ ಬದಲಾವಣೆ ಇಲ್ಲ; ಶಾಸನಭಂಗ ಕೈದಿಗಳ ಸಂಖ್ಯೆ ಈಗ ಕಡಿಮೆಯಾಗುತ್ತಿದೆ ಎಂದು ಮಿ। ಅಮರಿಯವರು ಕಾಮನ್ಸ್ ಮಂದಿರದಲ್ಲಿ ತಿಳಿಸಿದರು.

ರಷ್ಯದ ಕೈಗಾರಿಕೆಗಳ ಪ್ರಾಬಲ್ಯ

ರಷ್ಯದವರು ಒಂದು ವೇಳೆ ಉಕ್ರೈನಿನಿಂದ ಹಿಂದೆ ಸರಿದರೂ, ಅಲ್ಲಿಂದ ರಷ್ಯಕ್ಕೆ ಸರಬರಾಯಿಯಾಗುತ್ತಿರುವ ಪೆಟ್ರೋಲ್, ತಾಮ್ರ, ಸತು ಇತ್ಯಾದಿಗಳಿಗೆ ಕಡಿಮೆಯಾಗದು, ಉರಾಳ ಪ್ರಾಂತದ ದೊಡ್ಡ ಕೈಗಾರಿಕೆ ಕಾರ್ಖಾನೆಗಳು ಇವುಗಳನ್ನು ಬಹುಮಟ್ಟಿಗೆ ಒದಗಿಸುವುವು, ಬ್ರಿಟನೂ ಅಮೆರಿಕವೂ ರಷ್ಯಕ್ಕೆ ಅಲ್ಯುಮ್ಯೂನಿಯಮನ್ನು ಕಳುಹಿಸುವುವು ಎಂದು ಪ್ರಕಟವಾಗಿದೆ.

ಜಪಾನಿನಲ್ಲಿ ಬಿರುಗಾಳಿ, ಮಳೆ

ಈಚೆಗೆ ಪಶ್ಚಿಮ ಜಪಾನಿನಲ್ಲಿ ಅತಿ ವೃಷ್ಟಿ, ಬಿರುಗಾಳಿಗಳಿಂದ ನೆರೆ ಬಂದು, ಹಲವರು ಸತ್ತರು, ರೈಲ್ವೆ ವಹಿವಾಟು ನಿಂತಿತು ಎಂದು ಸುದ್ದಿ.

ಬೊಹೀಮಿಯದಲ್ಲಿ

ಇಲ್ಲಿ ಹಲವರನ್ನು ಜರ್ಮನರು ವಧಿಸುತ್ತಿರುವರೆಂದು ವಾರ್ತೆ. ಜೆಕ್ಕರ ಮಾಜಿ ಪ್ರಧಾನರಾದ ಜನರಲ್ ಎಲೋಯಿಸ್ ಇಲಿಯಸ್‌ರಿಗೂ ಮರಣದಂಡನೆಯೇ ವಿಧಿಸ್ಪಟ್ಟಿದೆಯಾದರೂ ಅವರ ವಧೆ ಆಯಿತೇ ಇಲ್ಲವೋ ಎಂಬ ಕುರಿತು ಪರಸ್ಪರ ವಿರೋಧವಾದ ವಾರ್ತೆಗಳು ಬಂದಿವೆ.

ನ್ಯಾಶನಲ್ ಡಿಫೆನ್ಸ್ ಕೌನ್ಸಿಲಿನ ಪ್ರಥಮ ಅಧಿವೇಶನ

ಈ ಕೌನ್ಸಿಲಿನ ಮೊದಲನೆಯ ಎಂಟಿಂಗ್ ವೈಸರಾಯರ ಸಿಮ್ಲಾ ಮಂದಿರದಲ್ಲಿ ಜರುಗಿತು. ಅಧ್ಯಕ್ಷತೆ ವೈಸರಾಯರದೇ. ಇದರ ಸದಸ್ಯರು ಗಳೆಲ್ಲ ಬಂದಿದ್ದರು. ವೈಸರಾಯರು ಈ ಎಂಟಿಂಗಿನಲ್ಲಿ ಯುದ್ಧ ನಡೆಸಲಿಕ್ಕೆ ಯುದ್ಧ ಪ್ರಯತ್ನಗಳನ್ನು ಹೆಚ್ಚಿಸುವುದೇ ಈ ಕೌನ್ಸಿಲಿನ ಉದ್ದೇಶವೆಂದರು. ನವ ನಗರದ ಮಾನ್ಯ ಜಾಮ್ ಸಾಹೇಬರು ಜಗತ್ತಿನ ನಾಗರಿಕತೆಯ ಭವಿಷತ್ತು ಕೆಡ ದಂತೆ ಹೂಡಲಾದ ಈ ಯುದ್ಧದಲ್ಲಿ ಹೃತ್ಪೂರ್ವಕವಾದ ಬೆಂಬಲ ನೀಡುವು ದಲ್ಲದೆ ಭಾರತ ನರೇಂದ್ರರಿಗೆ ಬೇರೆ ವಿಚಾರವಿಲ್ಲವೆಂದರು. ಸರ್ ಮಹಮ್ಮದ್ ಉಸ್ಮಾನರು ಈ ವೈಸರಾಯರ ಅಧಿಕಾ ರದ ಅವಧಿಯನ್ನು ಹೆಚ್ಚಿಸಲಾದ ಸಂಬಂಧ ಬ್ರಿಟಿಷ್ ಇಂಡಿಯಕ್ಕೆ ಉಂಟಾದ ತೃಪ್ತಿ ಯನ್ನು ಸೂಚಿಸಿದರು. ಇದಾದ ಬಳಿಕ ಈ ಕೌನ್ಸಿಲಿನ ಬಂದು ಗುಪ್ತ ಸಭೆಯೂ ಸೇರಿತು.

ಬ್ರಿಟಿಷ್ ಪ್ರಧಾನರಾದ ಮಿ। ಚರ್ಚ್ ಹಿಲ್ಲರು ಈ ಕೌನ್ಸಿಲಿಗೊಂದು ಶುಭ ಸಂದೇಶ ಕಳುಹಿಸಿದ್ದರು. ಈ ಕೌನ್ಸಿಲಿನ ಮೆಂಬರರು ರಕ್ಷಣಾ ಕಾರ್ಯಗಳಿಗೆ ಸಂಬಂಧಿಸಿದ ಹಲವು ವಿಷಯಗಳನ್ನು ಚರ್ಚಿಸಿದಂತೆ ತಿಳಿದು ಬಂದಿದೆ.

ರಾಜಾಜಿ, ಶ್ರೀ। ಪ್ರಕಾಶಂ ಮತ್ತು ಶ್ರೀ। ಗೋಪಾಲರೆಡ್ಡಿಗಳ ಬಿಡುಗಡೆ

ಕಳೆದ ತಾ.೬ರಲ್ಲಿ ಈ ಮೂರು ಮಂದಿ ಮುಖಂಡರನ್ನು, ಸತ್ಯಾಗ್ರಹ ಸಂಬಂಧವಾದ ಅವರ ಅವಧಿ ಮುಗಿದ ಬಳಿಕ ತಿರುಚಿನಾಪಳ್ಳಿ ಸೆಂಟ್ರಲ್ ಜೈಲಿಂದ ಬಿಡಲಾಯಿತು. ಜೈಲ್ ಗೇಟಿನ ಬಳಿ ಡಾ। ರಾಜನ್, ಶ್ರೀ। ಎಸ್. ರಮಾನಾಥನ್ ಮೊದಲಾದ ಅನೇಕ ಮಂದಿ ಪ್ರಮುಖರು ಕಾದಿದ್ದು ಇವರೆಲ್ಲ ರಿಗೂ ಸ್ವಾಗತ ಬಯಸಿದರು. ರಾಜಾಜಿ ಯವರು ತ್ರಿಚಿಯಲ್ಲಿ ಯಾವ ಹೇಳಿಕೆ ಯನ್ನೂ ಕೊಡಲಿಲ್ಲ. ಶ್ರೀ। ಪ್ರಕಾಶಂ ಅವರು ತಾವು ಗ್ರಾಮೋದ್ಧಾರ ಕಾರ್ಯ ವನ್ನು ಕೈಕೊಳ್ಳುವೆವೆಂದರು. ಶ್ರೀ। ರೆಡ್ಡಿಯವರೂ ಯಾವ ಹೇಳಿಕೆಯನ್ನೂ ಕೊಡಲಿಲ್ಲ. ರಾಜಾಜಿಯವರು ಅಲ್ಲಿನ ಸೈಂಟ್ ಜೋಸೆಫ್ ಕಾಲೇಜಿನಲ್ಲಿ ಅಂದು ಡಾ। ಠಾಗೋರರ ಭಾವಚಿತ್ರವನ್ನು ಅನಾವರಣಗೊಳಿಸುತ್ತ ಠಾಗೂರರ ಮೂಲಗ್ರಂಥಗಳನ್ನೂ ಓದಬೇಕೆಂದರು.

ಈ ಮೂರು ಮಂದಿ ಮಹನೀಯರೂ ಈಗ ಮದ್ರಾಸಿಗೆ ತಲುಪಿರುವರು. ಅಲ್ಲಿಯೂ ಹಲವು ಪ್ರಮುಖರಿಂದ ರೈಲ್ವೆ ಸ್ಟೇಶನಿನಲ್ಲಿ ಸುಸ್ವಾಗತ ದೊರಕಿತು. ಶ್ರೀ। ಆಚಾರಿಯವರು ತ್ಯಾಗರಾಜ ನಗರದ ತಮ್ಮ ಮನೆಗೆ ತೆರಳಿದರು. ಅಲ್ಲಿ ಅವ ರೇನೂ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿಕೆ ಕೊಡಲಿಲ್ಲ. ಅವರು ದಕ್ಷಿಣ ಇಂಡಿಯದ ಕಾರ್ಯಕ್ರಮಗಳನ್ನು ಪೂರೈಸಿ ವಾರ್ಧಾಕ್ಕೆ ತೆರಳಬಹುದಾಗಿದೆ. ಶ್ರೀ। ಪ್ರಕಾಶಂ ಅವರೂ ಇಲ್ಲಿಯೂ ಏನೂ ಹೇಳದೆ, ಮಹಾತ್ಮರನ್ನು ಕಾಣಬಹು ದೆಂದು ಮಾತ್ರ ಸೂಚಿಸಿರುವರು.

ಚಂಗ್‌ಚಾ

ಹನಾನ್ ಪ್ರಾಂತದ ಚಂಗ್ ಚಾವನ್ನು ತಾವು ಖಾಲಿಮಾಡಿರುವು ದಾಗಿ ಚೀನೀಯರು ಒಪ್ಪುತ್ತಾರಾದರೂ ಇದರ ಸವಿೂಪದಲ್ಲಿ ಘೋರ ಕಾದಾಟ ನಡೆಯುತ್ತಿದೆ ಎಂದು ತಿಳಿದುಬಂದಿದೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. 243/39
R. I. A. 949/41

ಪರಮೇಶ್ವರ ಭಟ್ಟ ಕೂಡಾ— **ಅರ್ಜಿದಾರರು.**

ಗಣಪತಿ ಭಟ್ಟ ಕೂಡಾ— **ಎದ್ರಿರು.**

ಸದ್ರಿ ವ್ಯಾಜ್ಯದ ಪ್ರತಿವಾದಿ ಎದ್ರಿಯರಿಗೆ.

ಸದ್ರಿ ವಾದಿ ಅರ್ಜಿದಾರರು ಪಡದ ಮೇಲ್ಕಂಡ ವ್ಯಾಜ್ಯದಲ್ಲಿಯ ಡಿಕ್ರಿ ಮೇಲೆ ದಾವಾ ಆಸ್ತಿ ಮಾರಾಟಕ್ಕೆ ಪ್ರಾಸಲ್ ಡಿಕ್ರಿ ಆಗಬೇಕಾಗಿ ಮಾಡಿಕೊಂಡ ಅರ್ಜಿಯ ತನ್ಕಿ ವ್ಯಾದೆಯು ತಾ. 23—10—41ಕ್ಕೆ ಇದೆ. ಆ ಕುರಿತು ಆಕ್ಷೇಪಗಳಿದ್ದರೆ ಆ ದಿವಸ 10 ಗಂಟೆಗೆ ಸ್ವತಹ ವ ವಕೀಲರ ಮುಖಾಂತರ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು ತಿಳಿ ದಿರಲಿ.

C. S. Shastry,
Vakil for Petitioner.

ಪುತ್ತೂರು, 1—10—41.


ಜೀವನೋಪಾಯವು ಹಾಳಾಗುವುದರಲ್ಲಿತ್ತು...
ನಾನು ಹೇಳುವುದೇನಂದರೆ–ಹುಂ! ಹುಂ!.....
ಬೇರೆ ಯಾರಾದರೂ ಮಾತನಾಡಲಿ!
ಸಾಕು, ನಿಲ್ಲಿಸಿ
ಕೂತುಕೊಳ್ಳಿ!
ಅತನು ಬಹು ಚುರುಕಾಗಿದ್ದನು ಆದರೆ ಇತ್ತೀಚೆಗೆ ಅವನಿಗೆ ತ್ರಾಣವೇ ಇಲ್ಲವೆಂದು ತೋರುತ್ತದೆ
ಡಾಕ್ಟರನ್ನು ನೋಡು. ನಿನ್ನ ಈ ಬಳಲಿಕೆಯನ್ನು ವಾಸಿಮಾಡಿಕೊಳ್ಳದಿದ್ದರೆ ನಿನ್ನ ಜೀವನೋಪಾಯವೇ ಹಾಳಾಗಬಹುದು
VOTE FOR
ನನ್ನ ಚೈತನ್ಯವೆಲ್ಲಾ ಹೋಗಿದೆ. ನನಗೆ ಯಾವಾಗಲೂ ಬಳಲಿಕೆಯಾಗಿರುತ್ತದೆ. ನಿಶ್ಚಯ ನಾನು ಡಾಕ್ಟರನ್ನು ನೋಡುವೆನು
ಹಾಗೆಯೇ ಅವನು ಡಾಕ್ಟರನ್ನು ನೋಡಿದನು
ನಾನು ಬೆಳಗಿನ ಜಾವ ಏಳುವಾಗಲೇ ಬಳಲಿಕೆಯಿಂದ ಏಳುತ್ತೇನೇ
"ಪ್ರಾತಃಕಾಲದ ದೌರ್ಬಲ್ಯ"ವೇ ನಿನ್ನ ಈ ಬಳಲಿಕೆಗೆ ಕಾರಣ. ನೀನು ಹಗಲೆಲ್ಲಾ ವ್ಯಯಮಾಡಿದ ಚೈತನ್ಯವನ್ನು, ಪುನಃರಾತ್ರಿ ನಿದ್ರಿಸುವಾಗ ಸಂಗ್ರಹಿಸುವುದಿಲ್ಲ, ಅನೇಕವ್ಯಾಧಿಸ್ಥರ ಅನುಭವದಂತೆ ಹಾರ್ಲಿಕ್ಸ್ ಶಕ್ತಿಯನ್ನೂ ಚೈತನ್ಯವನ್ನೂ ಪುನರ್ರಚಿಸುತ್ತದೆ ಇಂದೇ ಹಾರ್ಲಿಕ್ಸ್ ಸೇವಿಸುವುದಕ್ಕೆ ಪ್ರಾರಂಭಿಸು. ನಿದ್ರಿಸುವಾಗ ನಿನಗೆ ಚೈತನ್ಯವುಂಟಾಗುವುದು
ಪ್ರತಿದಿನವೂ ಹಾರ್ಲಿಕ್ಸ್ ಕೇವಲ ಸುಪುದಂದ ಅವನು ಪೂರ್ಣ ಚೈತನ್ಯವಾಗುವನು
ಈಗ ನಮ್ಮ ಜಿಲ್ಲಾವಿನ ತಾಲೂಕುಗಳೆಲ್ಲಾ ಸುತ್ತಿ ಬರುವೆನು.
ಆಹಾ! ಅವನಿಗೆ ಇರುವ ಶಕ್ತಿಯಿಂದಲೂ ಚೈತನ್ಯದಿಂದಲೂ ನಿಶ್ಚಯವಾಗಿಯೂ ಜಯಶಾಲಿಯಾಗುವನು
ಹಾರ್ಲಿಕ್ಸ್ ಶೇಕಡ ನೂರರಷ್ಟು ಪುಷ್ಟಿಕರವಾಗಿರುವುದರಿಂದ ಅಲಸಿಕೆಯನ್ನು ನುಚ್ಚುನೂರಾಗಿಸಿ ಚೈತನ್ಯವಾಗಿ ಮೂರ್ತಿಸುತ್ತದೆ. ಅಶಕ್ತರಾಗಿರುವಾಗ ನೀವು ದಿನವಹಿ ಸೇವಿಸುವ ಆಹಾರವು ನಿಮಗೆ ಹಿಡಿಯವಿದ್ದರೂ ನಿಮ್ಮ ಶರೀರಕ್ಕೆ ಪೋಷಣೆಯು ಅತ್ಯಾವಶ್ಯಕ ವೆನ್ನುವುದನ್ನು ಮರೆಯಬೇಡಿ. ಹಾರ್ಲಿಕ್ಸ್ ರೋಗಾವಸ್ಥೆಯಲ್ಲಿ ನಿಮ್ಮ ಶಕ್ತಿಯು ಕುಂದದಿರುವುದಕ್ಕೂ, ರೋಗವು ಗುಣಮುಖವಾಗುವುದಕ್ಕೂ ಸಹಾಯಕರವಾಗಿರುವುದು: ಕ್ಷಯ ರೋಗದಿಂದ ನೀವು ಹಾಗ್ರತೆ ಗುಣ ಹೊಂದುವುದಕ್ಕೂ ಸಹಾಯಕರವಾಗಿರುವುದು; ಕ್ಷಯ ರೋಗವು ನಿಮ್ಮ ನರದ ವರಗಳನ್ನು ಪುನರ್ರಚಿಸುವುದು ಮತ್ತು ನಿಮಗೆ ನವಶಕ್ತಿಯನ್ನೂ ಚೈತನ್ಯವನ್ನೂ ಉಂಟುಮಾಡುವುದು
HORLICKS
Horlicks Mixer
ನೀವು ಅಸ್ವಸ್ಥರಾಗಿರುವಾಗಲೂ, ಗುಣಹೊಂದುತ್ತಿರುವಾಗಲೂ ಅಥವಾ ಆಯಾಸದಿಂದ ಬಳಲಿ ಬೆಂಡಾಗಿದ್ದರೂ
ಹಾರ್ಲಿಕ್ಸ್ ಸೇವಿಸಿರಿ
ಆದು ನಿಮ್ಮನ್ನು "ಪ್ರಾತಃಕಾಲದ ದೌರ್ಬಲ್ಯ"ದಿಂದ ಕಾಪಾಡುತ್ತದೆ. ನೀವು ಚೆನ್ನಾಗಿ ನಿದ್ರಿಸುವಿರಿ. ನಿದ್ರೆಯಿಂದ ಉತ್ಸಾಹದಿಂದೇಳುವಿರಿ ಮತ್ತು ನಿಮ್ಮ ಚೈತನ್ಯವು ಪುನರ್ರಚಿತವಾಗುವುದು
H. 1601

ಅವನ್ನು ಅವನು ಉಪಯೋಗಿಸಿದುದು; ಅವನಿಗೆ ಅದೆಲ್ಲ ಗೊತ್ತು

ಲೀಬಿಯದ ಪಶ್ಚಿಮ ಮರಳ್ಗಾಡಿನ ರಣರಂಗದಿಂದ ಹಿಂದಿರುಗಿದ ಬ್ರಿಟಿಷ್ ಟ್ಯಾಂಕ್ ರಿಜಿಮೆಂಟಿನ ಒಬ್ಬ ಆಫೀಸರ್‌ನು ಉತ್ಕೃಷ್ಟ ಕೆಲಸ ಕಾರ್ಯಗಳಿಗಾಗಿ ಒಂದು ರಾಯಲ್ ಆರ್ಡಿನೆನ್ಸ್ ಫ್ಯಾಕ್ಟರಿಯ ಹುಡುಗಿಯರಿಗೆ ಪ್ರಶಂಸೆ ಸಲ್ಲಿಸುತ್ತಿರುವುದು. ಈ ಹುಡುಗಿಯರು "ಏಂಟಿ ಟ್ಯಾಂಕ್" ಮತ್ತು "ಏಂಟ್ಯಿಎಯರ್‌ಕ್ರಾಫ್ಟ್" ಕೋವಿಗಳನ್ನು ನಿರ್ಮಿಸುತ್ತಿದ್ದಾರೆ

ಕನ್ನಡ ನಾಡಹಬ್ಬ
ಮುಂಬಯಿಯಲ್ಲಿ

(೨ನೇ ಪುಟದಿಂದ ಮುಂದುವರಿದುದು)

ಯ್ತನ್ನು ಮತಕ್ಕೆ ಹಾಕಲು, ಪ್ರಚಂಡ ಕರತಾಡನೆಯೊಂದಿಗೆ ಅದು ಸರ್ವಾನುಮತದಿಂದ ಸ್ವೀಕೃತವಾಯಿತು.

ಆ ಮೇಲೆ ನಾಡ ಹಬ್ಬದ ವಿಶಿಷ್ಟ ಕಾರ್ಯಕ್ರಮವು ಪ್ರಾರಂಭವಾಯಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀ। ಕೆ. ಎನ್. ಗೌತೊಂಡೆಯವರು ತಮ್ಮ ಸ್ವಾಗತದ ಭಾಷಣದಲ್ಲಿ, ಕರ್ನಾಟಕದ ಉಜ್ವಲ ಗತವೈಭವವನ್ನು ವಿವರಿಸಿ ಸದ್ಯದ ಕರ್ನಾಟಕದ ಹಾಗೂ ಕನ್ನಡಿಗರ ಹೀನದೆಸೆಯನ್ನು ವರ್ಣಿಸಿ ಕರ್ನಾಟಕವು ಹಾಗೂ ಮುಂಬಯಿ ಪಟ್ಟಣದ ಕನ್ನಡಿಗರು ಮುಂದಾಗಬೇಕಾದರೆ, ಎಲ್ಲರೂ ಎಲ್ಲ ಸಂಸ್ಥೆಗಳೂ ಒಂದಾಗಿ, ಎಲ್ಲರ ಎಲ್ಲ ಬಗೆಯ ಹಿತವನ್ನು ಸಾಧಿಸುವ ಕಾರ್ಯವನ್ನು ಮಾಡುತ್ತಿರುವ ಸಂಯುಕ್ತ ಕರ್ನಾಟಕ ಸಂಘವನ್ನು ಬಲಪಡಿಸುವದೊಂದೇ ಉಪಾಯವೆಂದು ಸಭಿಕರ ಮನದಟ್ಟಾಗುವಂತೆ ವಿಶದಪಡಿಸಿದರು. ಬಳಿಕ ಸಭಾಧ್ಯಕ್ಷರು ತಮ್ಮ ವಿಚಾರ ಪರಿಪ್ಲುತವಾದ ಅಧ್ಯಕ್ಷೀಯ ಭಾಷಣದಲ್ಲಿ, ಕರ್ನಾಟಕತ್ವದ ಭಾವನೆ, ಕರ್ನಾಟಕ ಚಳವಳಿ, ಅದರ ಮೂಲ ತತ್ವ ಮತ್ತು ಉದ್ದೇಶಗಳು, ಅವುಗಳನ್ನು ಸಾಧಿಸಿಕೊಳ್ಳುವ ಸಾಧನಗಳು, ಕರ್ನಾಟಕಾಭಿಮಾನ ಹಾಗೂ ರಾಷ್ಟ್ರಾಭಿಮಾನ ಇವುಗಳ ಸಂಬಂಧ ಮತ್ತು ಸ್ವರೂಪ, ರಾಷ್ಟ್ರ ಭಾಷೆ ಮತ್ತು ಕನ್ನಡ ಭಾಷೆಗಳ ಪರಸ್ಪರ ಸಂಬಂಧ, ಕರ್ನಾಟಕದ ರಾಜಕೀಯ ಹಾಗೂ ಸಾಂಸ್ಕೃತಿಕ ಏಕೀಕರಣ, ಕರ್ನಾಟಕದಲ್ಲಿಯ ಬಹುಮತದವರ ಮತ್ತು ಅಲ್ಪಮತದವರ ಕರ್ತವ್ಯಗಳು, ಗಡಿನಾಡಿನ ಪ್ರಶ್ನೆ, ಅಖಿಲ ಕರ್ನಾಟಕದ ಸಮಸ್ಯೆಗಳು ಮತ್ತು ಅವುಗಳನ್ನು ಬಿಡಿಸುವ ಬಗ್ಗೆ ಒಂದು ಕೇಂದ್ರ ಸಂಸ್ಥೆಯ ಅವಶ್ಯಕತೆ, ನಾಡಹಬ್ಬದ ಉದ್ದೇಶಗಳು ಇವೇ ಮೊದಲಾದುವುಗಳನ್ನು ಕುರಿತು, ಮನನೀಯವಾಗಿ ವಿಶದಪಡಿಸಿದರು. ಅಧ್ಯಕ್ಷರ ಭಾಷಣದ ನಂತರ ಸಂಯುಕ್ತ ಕರ್ನಾಟದ ಸಂಘದ ಅಧ್ಯಕ್ಷರಾದ ದಿವಾನ್ ಬಹದ್ದೂರ ಕೆ. ರಾಮಸ್ವಾಮಿಯವರು, ಮುಂಬಯಿ ಪಟ್ಟಣದ ಕನ್ನಡಿಗರು ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವದು ಅವರ ಆದ್ಯ ಕರ್ತವ್ಯವೆಂದು ಬಹು ಪರಿಣಾಮಕಾರಿಯಾಗಿ ವಿವರಿಸಿದರು. ಬಳಿಕ ಶ್ರೀ। ಜಿ. ಕೇ. ಬಿಟಗೇರಿಯವರು ಸಭಾಧ್ಯಕ್ಷರ ಹಾಗೂ ನೆರೆದ ಸಭಿಕರೆಲ್ಲರ ಮತ್ತು ನಾಡಹಬ್ಬವನ್ನು ಯಶಸ್ವಿ ರೀತಿಯಿಂದ ನೆರವೇರಿಸುವದಕ್ಕೆ ಸಹಾಯ ಮಾಡಿದ ಎಲ್ಲ ಕನ್ನಡ ಸಂಸ್ಥೆಗಳ ಆಭಾರವನ್ನು ಮನ್ನಿಸಿದರು. ದಿವಾನ್ ಬಹದ್ದೂರ ರಾಮಸ್ವಾಮಿಯವರು ಸಭಾಧ್ಯಕ್ಷರಿಗೆ ಹೂಮಾಲೆಗಳನ್ನರ್ಪಿಸಿ ವಂದಿಸಿದರು.

ಆ ಮೇಲೆ ಮನರಂಜನೆಯ ಕಾರ್ಯಕ್ರಮವು ಪ್ರಾರಂಭವಾಯಿತು. ಪ್ರೊಫೆಸರ ವೆಂಕಟ ರಾಯರ ಹಾಗೂ ಅವರ ಗೆಳೆಯರ ಅದ್ಭುತ ಶಕ್ತಿಪ್ರಯೋಗ ಕೌಶಲ್ಯಗಳ ಪ್ರಯೋಗಗಳು ಜರುಗಿದವು. ಬಳಿಕ ಕಾರ್ತ್ಯಾಯಿನೀಯಕ್ಷಗಾನ ಮಂಡಲದವರು ದಶಾವತಾರದ ಕೆಲವು ದೃಶ್ಯಗಳನ್ನಭಿನಯಿಸಿದರು. ಆ ಮೇಲೆ ದೇವಡಿಗ ಸುಧಾರಕ ಸಂಘದವರು, "ಕನ್ನಡಮ್ಮನ ಮೊರೆ" ಎಂಬ ಉದ್ಬೋಧಕ ದೃಶ್ಯವನ್ನಭಿನಯಿಸಿದರು. ಬಳಿಕ ರೂಪಾಯತಿ ನೃತ್ಯ ಶಾಲೆಯ ವಿದ್ಯಾರ್ಥಿನಿಯರು ಕೌಶಲ್ಯ ಪೂರ್ಣವಾದ ಹಾಗೂ ಮನೋಹರವಾದ ನರ್ತನವನ್ನು ಮಾಡಿದರು. ನಂತರ, ಕರ್ನಾಟಕ ನೂತನ ಸಂಗೀತ ಸಭೆಯವರು "ಆಧುನಿಕ ಸಂಸಾರ" ಎಂಬ ಉದ್ಬೋಧಕ ನಾಟಕವನ್ನು ಬಹು ಮನೋಹರವಾಗಿ ಅಭಿನಯಿಸಿ ತೋರಿಸಿದರು. ಮೊಗವೀರ ಪ್ರಾಥಮಿಕ ಶಾಲೆಯ ಬಾಲಬಾಲೆಯರು ಮಂಗಲ ಪದಗಳನ್ನು ಅಂದ ನಂತರ ಸಮಾರಂಭವು ಬಹು ಉತ್ಸಾಹಪೂರ್ಣ ವಾತಾವರಣದಲ್ಲಿ ಕೊನೆಗಂಡಿತು.

ಬ್ರಿಟಿಷ್ ವಿಮಾನಬಲದ ಚಟುವಟಿಕೆ

ಬೆಲ್ಜಿಯಂ ಕರಾವಳಿಯಲ್ಲಿ ಬ್ರಿಟಿಷ್ ವಿಮಾನಗಳು ನಾಲ್ಕು ಜರ್ಮನ್ ಟ್ರಾವಲರುಗಳ ಮೇಲೆ ಆಕ್ರಮಿಸಿ ಒಂದನ್ನು ಮುಳುಗಿಸಿ ಇನ್ನೊಂದಕ್ಕೆ ಬೆಂಕಿ ಹಚ್ಚಿದುವು.

LIFE INSURANCE

Is the one investment which in peace or war knows no depreciation. It is the only scientific means which plans with prudence and certainty against the hazards of unknown tomorrow.

EVERY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

Let "Popular", the successful and progressive life office of your own district, plan your future.

THE POPULAR INSURANCE CO., LTD.,

Head Office: **MANGALORE, S. I.**

ನೀವು ಕಿಸೆಗಡಿಯಾರವನ್ನು ಇಷ್ಟಪಡುವಿರಾ?

Pocket watch?

ಹಾಗಾದರೆ ಇಲ್ಲಿದೆ ನಿಮಗೆ ಸುಸಂದರ್ಭ!

ಕೈಯ ಮಣಿಗಂಟಿಗಿಂತಲೂ ನಿಮ್ಮ ಕಿಸೆಯೊಳಗೆನೇ ಕಾಲಸೂಚಿಯನ್ನು ಇಷ್ಟಪಡುವ ಬಹಳ ಮಂದಿಗಳಲ್ಲಿ ನೀವೂ ಒಬ್ಬರಾಗಿರುವಿರಾ? ನೀವು ಕಳಕೊಳ್ಳಲಾಗದ ಸುಸಂದರ್ಭವಿದಾಗಿರುತ್ತದೆ. ಪ್ರತಿಯೊಂದು ಕಾಲಸೂಚಿಯೂ ಫೇವರ್—ಲ್ಯೂಬಾದ ಪ್ರಖ್ಯಾತ ಗ್ಯಾರಂಟಿಯನ್ನು ಹೊಂದಿದೆ ಮತ್ತು ಅನೇಕ ವರ್ಷಗಳ ವಿಶ್ವಾಸಾರ್ಹವಾದ ಸೇವೆಯನ್ನು ಕೊಡುವದು. ಮದ್ರಾಸಿನ ಸೈದಾಪೇಟೆಯ ಒಬ್ಬ ಗಿರಾಕಿಯು 53 ವರ್ಷಗಳ ನಂತರ ತನ್ನ ಫೇವರ್ ಲ್ಯೂಬ್ಸ್ ಕಿಸೆ ಗಡಿಯಾರವು 'ಇನ್ನೂ ಚಲಿಸುತ್ತಾ ಇದೆ ಮತ್ತು ನಿಖರ ಕಾಲ ಸೂಚಿಯಾಗಿದೆ. ಅದು ತಾಜಾ ಸಂಚಯ.....' ಎಂದು ಬರೆಯುತ್ತಿರುವನು.



5191	ಜೊನ್ ಬೆರೆಲ್, ಲೆನ್ಸ್ ಆಕಾರದ ರೋಲ್ಡ್ ಗೋಲ್ಡ್ ಕೇಸ್ ರೂ. 34	5069	ನ್ಯೂ ಮಾರ್ವಲ್, ಲೆನ್ಸ್ ಆಕಾರದ ತಾಜಾ ನಿಕಲ್ ಕೇಸ್ ರೂ. 20
5181	ಜೊನ್ ಬೆರೆಲ್, ಕ್ರಿಸ್ಟಲ್ ಆಕಾರದ ರೋಲ್ಡ್ ಗೋಲ್ಡ್ ಕೇಸ್ ರೂ. 34	5079	ನ್ಯೂ ಮಾರ್ವಲ್, ಕ್ರಿಸ್ಟಲ್ ಆಕಾರದ ತಾಜಾ ನಿಕಲ್ ಕೇಸ್ ರೂ. 20
5189	ಜೊನ್ ಬೆರೆಲ್, ತಾಜಾ ನಿಕಲ್ ಕೇಸ್ ರೂ. 20	5199	ಜೊನ್ ಬೆರೆಲ್, ಲೆನ್ಸ್ ಆಕಾರದ ತಾಜಾ ನಿಕಲ್ ಕೇಸ್ ರೂ. 20

Favre-Leuba & Co LIMITED

BOMBAY CALCUTTA RANGOON

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore